ಜನತಾವಾಣಿ
ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಮಾರ್ಚ್ 10, 2021

ಸಂಪುಟ : 47 ಸಂಚಿಕೆ : 310 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

# ಮಾ.16ರಿಂದ ಮತ್ತೆ ಸಾರಿಗೆ ನೌಕರರ ಮುಷ್ಕರ

**ನೌಕರರ ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ಗಡುವು**

ಬೆಂಗಳೂರು, ಮಾ. 9 - ತಮ್ಮ ಯಾವುದೇ ಬೇಡಿಕೆಗಳು ಈಡೇರದ ಹಿನ್ನೆಲೆಯಲ್ಲಿ ಸಾರಿಗೆ ನೌಕರರು ಮಾ.16ರಿಂದ ಮುಷ್ಕರ ನಡೆಸಲು ಮುಂದಾಗಿದ್ದಾರೆ.

6ನೇ ವೇತನ ಆಯೋಗದ ಶಿಫಾರಸ್ಸು ಸೇರಿದಂತೆ 9 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಳೆದ ಡಿಸೆಂಬರ್‌ನಲ್ಲಿ ನಾಲ್ಕು ದಿನಗಳ ಕಾಲ ಬಸ್ ಸಂಚಾರ ಸ್ಥಗಿತಗೊಳಿಸಿ, ಪ್ರತಿಭಟನೆ ನಡೆಸಿದ್ದ ಸಾರಿಗೆ ನೌಕರರ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಮೂರು ತಿಂಗಳ ಸಮಯಾವಕಾಶ ಕೇಳಿತ್ತು.

ಸರ್ಕಾರ ನೀಡಿದ್ದ ಸಮಯಾವಕಾಶ ಮಾ.15ಕ್ಕೆ ಮುಗಿಯಲಿದ್ದು, ಹಾಗೂ ನಿನ್ನೆ ಮಂಡಿಸಿದ ಬಜೆಟ್‌ನಲ್ಲಿ 6ನೇ ವೇತನ ಆಯೋಗದ ಶಿಫಾರಸ್ಸಿನ ಬಗ್ಗೆ ಮತ್ತು ನೌಕರರ ಬೇಡಿಕೆಗಳ ಈಡೇರಿಕೆ ಸಂಬಂಧ ಯಾವುದೇ ಪ್ರಸ್ತಾಪ ಮಾಡದೆ ಇರುವ ಹಿನ್ನೆಲೆಯಲ್ಲಿ, ಮತ್ತೆ ಪ್ರತಿಭಟನೆ ನಡೆಸಲು ಸಾರಿಗೆ ನೌಕರರು ಮುಂದಾಗಿದ್ದು, ಈ ಸಂಬಂಧ ಮಹತ್ವದ ಸಭೆ ನಡೆಸಿದರು. ಸಾರಿಗೆ ನೌಕರರ ಒಕ್ಕೂಟದ (2ನೇ ಪುಟಕ್ಕೆ)

# ಹಣ ಪಡೆದು ಗುಣಮಟ್ಟದ ಪಡಿತರ ವಿತರಣೆಗೆ ಚಿಂತನೆ

**ಸಚಿವ ಉಮೇಶ್ ಕತ್ತಿ**



ಬೆಂಗಳೂರು, ಮಾ. 9 - ಪಡಿತರ ಅಂಗಡಿಗಳ ಮೂಲಕ ಆದ್ಯತಾ ಪಡಿತರ ಚೀಟಿಗಳಿಗೆ ಸದ್ಯಕ್ಕೆ ಉಚಿತವಾಗಿ ಅಕ್ಕಿ, ಗೋಧಿ ಹಾಗೂ ಆಹಾರ ಧಾನ್ಯವನ್ನು ನೀಡಲಾಗುತ್ತಿದೆ. ಆದರೆ, ಮುಂದಿನ ದಿನಗಳಲ್ಲಿ ಇದಕ್ಕೆ ಹಣ ಪಡೆದು ಗುಣಮಟ್ಟದ ಆಹಾರ ಒದಗಿಸುವ ಕುರಿತು ಪರಿಶೀಲನೆ ನಡೆಸಲಾಗುವುದು ಎಂದು ಸಚಿವ ಉಮೇಶ್ ಕತ್ತಿ ಹೇಳಿದ್ದಾರೆ.

ವಿಧಾನಪರಿಷತ್‌ನ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಸದಸ್ಯ ಪಿ. ಆರ್.ರಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 10,90,951 ಅಂತ್ಯೋದಯ ಅನ್ನ ಪಡಿತರ ಚೀಟಿಗಳು, 1,16,83,545 ಆದ್ಯತಾ ಪಡಿತರ ಚೀಟಿಗಳು ಸೇರಿ 1.27 ಕೋಟಿ ಪಡಿತರ ಚೀಟಿಗಳಿವೆ. ಅಂತ್ಯೋದಯ ಅನ್ನ ಪಡಿತರ ಚೀಟಿದಾರರಿಗೆ 35 ಕೆಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಆದ್ಯತಾ ಪಡಿತರ ಚೀಟಿದಾರರಿಗೆ 5 ಕೆಜಿ ಅಕ್ಕಿ, 2 ಕೆಜಿ ಗೋಧಿ ನೀಡುತ್ತಿದ್ದೇವೆ. ಹಿಂದಿನ ಸರ್ಕಾರದಂತೆ ಉಚಿತ ಪಡಿತರ ಪರಿಪಾಠವನ್ನು ಮುಂದುವರೆಸಿದ್ದೇವೆ. ಸದ್ಯಕ್ಕೆ ಇದಕ್ಕೆ ಹಣ ಪಡೆಯುವ ಪ್ರಸ್ತಾವನೆ ಇಲ್ಲ. ಆದರೆ ಮುಂದಿನ ದಿನಗಳಲ್ಲಿ ಗುಣಮಟ್ಟದ ಆಹಾರ ಪೂರೈಕೆಗಾಗಿ ದರ ನಿಗದಿ ಮಾಡಲು ಪರಿಶೀಲಿಸಲಾಗುವುದು ಎಂದರು.

ಸರ್ಕಾರದಿಂದ ಅನುದಾನ ಪಡೆಯುತ್ತಿರುವ ನೌಕರರು, 3 ಹೆಕ್ಟೇರ್ ಒಣ ಭೂಮಿ ಅಥವಾ ನೀರಾವರಿ ಭೂಮಿ ಹೊಂದಿರುವವರು ಸಾವಿರ ಚದರ ಅಡಿ ಹಾಗೂ ಹೆಚ್ಚಿನ ವಿಸ್ತೀರ್ಣವುಳ್ಳ ಪಕ್ಕಾ ಮನೆ ಹೊಂದಿರುವ ಕುಟುಂಬದವರು, (2ನೇ ಪುಟಕ್ಕೆ)





# ಸಿ.ಡಿ. ಹಿಂದೆ ಪ್ರಭಾವಿ ನಾಯಕರ ಕೈವಾಡ

## 2+3+4 ಜನರ ತಂಡದಿಂದ ಕೃತ್ಯ : ರಮೇಶ್ ಜಾರಕಿಹೊಳಿ ಆರೋಪ



ಬೆಂಗಳೂರು, ಮಾ. 9 - ಸಿ.ಡಿ. ಷಡ್ಯಂತ್ರದ ಹಿಂದೆ ಬೆಂಗಳೂರಿನ ಕೇಂದ್ರ ಸ್ಥಾನದಲ್ಲಿ ನೆಲೆಯೂರಿರುವ ಪ್ರಭಾವಿ ನಾಯಕರ ಕೈವಾಡ ಇದೆ ಎಂದು ಕೆ.ಪಿ.ಸಿ.ಸಿ.ಯಲ್ಲಿ ಉನ್ನತ ಸ್ಥಾನದಲ್ಲಿರುವ ನಾಯಕರ ಹೆಸರನ್ನು ಪ್ರಸ್ತಾಪಿಸದೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಆರೋಪಿಸಿದ್ದಾರೆ.

ನನ್ನ ವಿರುದ್ಧದ ಷಡ್ಯಂತ್ರ ಮುಂಬೈನಲ್ಲಿ ನಡೆದಿಲ್ಲ. ಬೆಂಗಳೂರಿನಲ್ಲೇ ಕೆಲವು ಮಂದಿ ಸೇರಿ ಮಾಡಿರುವ ಕುತಂತ್ರ ಇದು, ಇವರ ವಿರುದ್ಧ 100 ಕೋಟಿ ರೂ. ವೆಚ್ಚವಾದರೂ ಸರಿ ಕಾನೂನು ಹೋರಾಟ ನಡೆಸುವೆ ಎಂದು ಸವಾಲು ಹಾಕಿದ್ದಾರೆ.

ರಾಸಲೀಲೆ ಸಿ.ಡಿ. ವಿಚಾರಕ್ಕೆ ಸಂಬಂಧಿಸಿದಂತೆ ಮೊದಲ ಬಾರಿ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ರಮೇಶ್ ಜಾರಕಿಹೊಳಿ, ನನ್ನ ತೇಜೋವಧೆಗಾಗಿ ಇಂತಹ ತಂತ್ರಗಾರಿಕೆ ಮಾಡಿದ್ದಾರೆ, ಅವರನ್ನು ಜೈಲಿಗೆ ಕಳುಹಿಸದೇ ಬಿಡುವುದಿಲ್ಲ ಎಂದು ಶಪಥ ಮಾಡಿದ್ದಾರೆ.

ನಾನು ಅಪರಾಧಿಯಲ್ಲ, ನಿರಪರಾಧಿ ಎಂದು ಕಣ್ಣಂಚಿನ ನೀರಿನೊಂದಿಗೆ ಮಾತನಾಡಿದ ಅವರು, ವಿಡಿಯೋ ಬಿಡುಗಡೆಗೂ 24 ಗಂಟೆ ಮುಂಚಿತವಾಗಿ ಈ ವಿಡಿಯೋ ಬಗ್ಗೆ ಬಿಜೆಪಿ ಮುಖಂಡರು ನನ್ನ ಗಮನಕ್ಕೆ ತಂದಿದ್ದರು. ನಾನು ಯಾವುದೇ ತಪ್ಪು ಮಾಡಿರಲಿಲ್ಲ, ಹಾಗಾಗಿ ನನ್ನ ಕೆಲಸದಲ್ಲಿ ಮಗ್ನನಾಗಿದ್ದೆ, 2+3+4 ಜನರ ತಂಡ ಈ ಷಡ್ಯಂತ್ರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ. ಓರ್ವ ಮಹಾನ್ ನಾಯಕ ಸಿ.ಡಿ. (2ನೇ ಪುಟಕ್ಕೆ)

# ಕಬ್ಬನ್ ಪಾರ್ಕ್ ಠಾಣೆಯಲ್ಲಿ ದೂರು

ಬೆಂಗಳೂರು, ಮಾ. 9 - ಮಾಜಿ ಸಚಿವ ರಮೇಶ್ ಜಾರಕಿಹೊಳಿ ಪ್ರಕರಣ ಕುರಿತು ನಗರದ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣದ ಬಗ್ಗೆ ಕಾನೂನು ಪ್ರಕಾರ ತನಿಖೆ ನಡೆಸಲಾಗುವುದು. ಎಲ್ಲ ವಿಚಾರಣೆ ಕಾನೂನು (2ನೇ ಪುಟಕ್ಕೆ)

# ಕೊವ್ಯಾಕ್ಸಿನ್ ಸುರಕ್ಷಿತ ಲ್ಯಾನ್ಸೆಟ್ ವರದಿ

ನವದೆಹಲಿ, ಮಾ. 9 – ಕೊರೊನಾ ವಿರುದ್ಧದ ಭಾರತದ ಮೊದಲ ದೇಶೀಯ ಲಸಿಕೆಯಾದ ಕೊವ್ಯಾಕ್ಸಿನ್ ಸುರಕ್ಷಿತವಾಗಿದೆ ಹಾಗೂ ಯಾವುದೇ ಗಂಭೀರ ಅಡ್ಡಪರಿಣಾಮ ಗಳಿಲ್ಲದೇ ರೋಗ ನಿರೋಧಕತೆ ತರುತ್ತದೆ ಎಂಬುದು (2ನೇ ಪುಟಕ್ಕೆ)

**ಸಾಲ ಸೌಲಭ್ಯ**

ಮಾರ್ಕ್ಸ್ ಕಾರ್ಡ್, ಪ್ರಾಪರ್ಟಿ, ಪರ್ಸನೆಲ್ ಪ್ರಾಜೆಕ್ಟ್ ಮೇಲೆ ವಾರ್ಷಿಕ ಶೇ. 2ರ ಬಡ್ಡಿ ದರದಲ್ಲಿ ಸಬ್ಸಿಡಿ ಸಾಲವನ್ನು ಕೊಡಲಾಗುತ್ತದೆ. ಏಜೆಂಟರಿಗೆ ಅವಕಾಶವಿದೆ. ಆಸಕ್ತರು ಇದರ ಸದಾವಕಾಶವನ್ನು ಪಡೆದುಕೊಳ್ಳಲು ಕೂಡಲೇ ಸಂಪರ್ಕಿಸಿ

**63604 56791**




# ಸೈಬರ್ ಕ್ರೈಂ : ಮುಂಚೂಣಿಯಲ್ಲಿ ಮಹಾರಾಷ್ಟ್ರ, ಕರ್ನಾಟಕ

ನವದೆಹಲಿ, ಮಾ. 9 – ಕಳೆದ ಹದಿನೆಂಟು ತಿಂಗಳಲ್ಲಿ 3,17,439 ಸೈಬರ್ ಅಪರಾಧಗಳು ದಾಖಲಾಗಿವೆ ಹಾಗೂ 5,771 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ. ಇವುಗಳಲ್ಲಿ ಬಹು ಸಂಖ್ಯೆಯ ಪ್ರಕರಣಗಳು ಮಹಾರಾಷ್ಟ್ರ ಹಾಗೂ ಕರ್ನಾಟಕದವುಗಳು ಎಂದು ಲೋಕಸಭೆಗೆ ಮಾಹಿತಿ ನೀಡಲಾಗಿದೆ.



ರಾಷ್ಟ್ರೀಯ ಸೈಬರ್ ಅಪರಾಧಗಳ ದಾಖಲೆಗಳ ಪೋರ್ಟಲ್ ಪ್ರಕಾರ, ಆಗಸ್ಟ್ 30, 2019ರಿಂದ ಇಲ್ಲಿಯವರೆಗೆ ಈ ಸಂಖ್ಯೆಯ ಪ್ರಕಣಗಳು ದಾಖಲಾಗಿವೆ ಎಂದು ಕೇಂದ್ರ ಗೃಹ ಖಾತೆ ಅಧೀನ ಸಚಿವ ಜಿ. ಕಿಶನ್ ರೆಡ್ಡಿ ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ 50,806 ಸೈಬರ್ ಅಪರಾಧ ಪ್ರಕರಣಗಳು ನಡೆದಿವೆ ಹಾಗೂ 534 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ. ಕರ್ನಾಟಕದಲ್ಲಿ 21,562 ಸೈಬರ್ ಅಪರಾಧದ ಘಟನೆಗಳು ನಡೆದಿವೆ ಹಾಗೂ 87 ಎಫ್‌ಐ. ಆರ್. ದಾಖಲಿಸಲಾಗಿದೆ ಎಂದು ರೆಡ್ಡಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.


# ತೈಲ ಗದ್ದಲ: ಸಂಸತ್ ಕಲಾಪ ಮುಂದೂಡಿಕೆ

ನವದೆಹಲಿ, ಮಾ. 9 – ತೈಲ ಬೆಲೆ ಏರಿಕೆ ಕುರಿತು ಪ್ರತಿಪಕ್ಷಗಳು ನಡೆಸಿದ ಗದ್ದಲದ ಕಾರಣದಿಂದಾಗಿ ಸಂಸತ್ತಿನ ಉಭಯ ಸದನಗಳ ಕಲಾಪಕ್ಕೆ ಅಡ್ಡಿಯಾಗಿದೆ.

ರಾಜ್ಯಸಭೆಯಲ್ಲಿ ಬೆಲೆ ಏರಿಕೆಯ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಈ ವಿಷಯದ ಬಗ್ಗೆ ಚರ್ಚೆ ನಡೆಸಬೇಕೆಂದು ಒತ್ತಾಯಿಸಿದರು.

ಇದಕ್ಕೆ ಆಕ್ಷೇಪಿಸಿದ ಕಾನೂನು ಸಚಿವ ರವಿ ಶಂಕರ್ ಪ್ರಸಾದ್, ಸಂಧಾನ ಹಾಗೂ ಮಧ್ಯಸ್ಥಿಕೆ ತಿದ್ದುಪಡಿ ಕಾಯ್ದೆಯ ಕುರಿತು ಚರ್ಚಿಸಬೇಕೆಂದು ಆಗ್ರಹಿಸಿದರು.

ಲೋಕಸಭೆಯಲ್ಲೂ ಸಹ ಸತತ ಎರಡನೇ ದಿನ ತೈಲ ಬೆಲೆ ಏರಿಕೆ ವಿರೋಧಿಸಿ ಪ್ರತಿಪಕ್ಷಗಳು ಗದ್ದಲ ನಡೆಸಿದ ಕಾರಣ ಯಾವುದೇ ಕಲಾಪ ನಡೆಯಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಗದ್ದಲ ನಡೆಸಿದ ಕಾರಣ ಕಲಾಪವನ್ನು ಮುಂದೂಡಲಾಗಿದೆ.














# ಪಡಿತರ ವಿತರಣೆಗೆ ಚಿಂತನೆ

**(1ನೇ ಪುಟದಿಂದ)** ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್ ಹೊರತುಪಡಿಸಿ ಸ್ವಂತ ಬಳಕೆಗಾಗಿ ನಾಲ್ಕು ಚಕ್ರ ವಾಹನ ಹೊಂದಿರುವವರು ಹಾಗೂ 1.20 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವ ಕುಟುಂಬಗಳನ್ನು ಬಿಪಿಎಲ್ ಪಟ್ಟಿಯಿಂದ ಹೊರಗಿಡಲಾಗಿದೆ. ಈವರೆಗೂ 2,28,188 ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ. ಅವರಿಂದ 3.07ಕೋಟಿ ದಂಡ ವಸೂಲಿ ಮಾಡಲಾಗಿದೆ ಎಂದು ಹೇಳಿದರು.

ಬಿಪಿಎಲ್ ಮಾನದಂಡಗಳನ್ನಾಗಲೀ ಅಥವಾ ಬೇರೆ ಯಾವುದೇ ಹೊಸ ತಿದ್ದುಪಡಿಗಳನ್ನು ನಾವು ರೂಪಿಸಿಲ್ಲ. 2017ರಲ್ಲಿ ಸಿದ್ದರಾಮಯ್ಯ ಸರ್ಕಾರ ರೂಪಿಸಿದ ನಿಯಮಗಳನ್ನೇ ಮುಂದುವರೆಸಿದ್ದೇವೆ. ವಾರ್ಷಿಕ ಆದಾಯದ ಮಿತಿಯನ್ನು ಹೆಚ್ಚಳ ಮಾಡಬೇಕೆಂಬ ಬೇಡಿಕೆ ಯಿದೆ. ಉದ್ಯೋಗ ಖಾತ್ರಿಯಡಿ ಕೆಲಸ ಮಾಡುವವರಿಗೆ ದಿನವೊಂದಕ್ಕೆ 272 ರೂ. ಕೂಲಿ ನೀಡುತ್ತಿದ್ದೇವೆ. ಆ ಒಟ್ಟು ಆದಾಯವನ್ನು ಲೆಕ್ಕ ಹಾಕಿ ವಾರ್ಷಿಕ ಆದಾಯ ಮಿತಿಯನ್ನು ಪರಿಷ್ಕರಣೆ ಮಾಡಲು ಚಿಂತನೆ ನಡೆಸಿದ್ದೇವೆ ಎಂದರು.

ಜೆಡಿಎಸ್ ಶಾಸಕ ಮರಿತಿಬ್ಬೇಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಕನಿಷ್ಠ ಬೆಂಬಲ ಯೋಜನೆಯಡಿ ಖರೀದಿಸಲಾಗಿರುವ ಭತ್ತಕ್ಕೆ 93 ಕೋಟಿ ರೂ. ಬಾಕಿ ಪಾವತಿಸಬೇಕು ಮತ್ತು 5.93 ಲಕ್ಷ ಹಲ್ಲಿಂಗ್ ಹಣವನ್ನು ಗಿರಣಿ ಮಾಲೀಕರಿಗೆ ಪಾವತಿಸಬೇಕಿದೆ. ಈ ಹಲ್ಲಿಂಗ್ ಮೊತ್ತವನ್ನು ವಾರದೊಳಗೆ ಪಾವತಿಸಲಾಗುವುದು. ಉಳಿದಂತೆ 93 ಕೋಟಿ ರೂ.ಗಳನ್ನು ಮಾರ್ಚ್ ಅಂತ್ಯದೊಳಗೆ ಪಾವತಿಸಲಾಗುವುದು ಎಂದು ಭರವಸೆ ನೀಡಿದರು.

ಖರೀದಿ ಮಾಡಲಾದ ಭತ್ತವನ್ನು ದಾಸ್ತಾನು ಮಾಡಲು ಸರ್ಕಾರ ಗೋದಾಮು ಗಳನ್ನು 5 ತಿಂಗಳವರೆಗೆ ಬಾಡಿಗೆಗೆ ಪಡೆದಿತ್ತು. ಈಗ 8 ತಿಂಗಳವರೆಗೂ ಭತ್ತವನ್ನು ದಾಸ್ತಾನು ಮಾಡುವ ಪರಿಸ್ಥಿತಿ ಬಂದಿದೆ. ಬಾಕಿ 3 ತಿಂಗಳ ಬಾಡಿಗೆಯನ್ನು ಗಿರಣಿ ಮಾಲೀಕರು ನೀಡಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಸಚಿವರ ಗಮನಕ್ಕೆ ತಂದರು. ಅದಕ್ಕೆ ಪ್ರತಿಕ್ರಿಯಿಸಿದ ಉಮೇಶ್ ಕತ್ತಿ ಅವರು, ಈ ವಿಷಯ ನನ್ನ ಗಮನಕ್ಕೆ ಬಂದಿರಲಿಲ್ಲ. ಸರ್ಕಾರದಿಂದ ಬಾಕಿ ಬಾಡಿಗೆಯನ್ನು ಪಾವತಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಕಾಂಗ್ರೆಸ್ ಸದಸ್ಯರಾದ ಹರಿಪ್ರಸಾದ್ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವ ಕತ್ತಿ ಅವರು, ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿ ಹಾಗೂ ಆಹಾರ ಧಾನ್ಯಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ 786 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 63,637 ಕ್ವಿಂಟಾಲ್ ಅಕ್ಕಿ, 773 ಕ್ವಿಂಟಾಲ್ ಗೋಧಿ, 1.2 ಕ್ವಿಂಟಾಲ್ ಸಕ್ಕರೆ, 630 ಕ್ವಿಂಟಾಲ್ ರಾಗಿ, 29 ಕ್ವಿಂಟಾಲ್ ತೊಗರಿಬೇಳೆ ಕಾಳುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಇದರಲ್ಲಿ ಬೀದರ್, ಕಲಬುರಗಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅತಿ ಹೆಚ್ಚು ಅಕ್ರಮವಾಗಿ ದಾಸ್ತಾನಾಗಿರುವುದು ಪತ್ತೆಯಾಗಿದೆ. ಅಂಗಡಿದಾರರು, ದಾಸ್ತಾನುದಾರರು ಮತ್ತು ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿದೆ ಎಂದು ಸಚಿವರು ವಿವರಣೆ ನೀಡಿದ್ದಾರೆ.

ಪಡಿತರ ಚೀಟಿದಾರರಿಗೆ ನೀಡುತ್ತಿರುವ ಅಕ್ಕಿಯ ಪ್ರಮಾಣದ ಬಗ್ಗೆ ಹರಿಪ್ರಸಾದ್ ಅವರು ಪ್ರಶ್ನಿಸಿದಾಗ, ಲಾಕ್‌ಡೌನ್ ವೇಳೆ ಎಲ್ಲರಿಗೂ ಆಹಾರ ಧಾನ್ಯದ ಸಮಾನ ಹಂಚಿಕೆ ಯಾಗಬೇಕು ಎಂಬ ಕಾರಣಕ್ಕಾಗಿ 7 ಕೆಜಿ ಬದಲಾಗಿ 5 ಕೆಜಿ ಅಕ್ಕಿಯನ್ನು ಹಂಚಿಕೆ ಮಾಡಲು ನಿರ್ಧಾರ ತೆಗೆದುಕೊಳ್ಳಲಾಯಿತು ಎಂದು ಹೇಳಿದರು.

# ಪ್ರಭಾವಿ ನಾಯಕರ ಕೈವಾಡ

**(1ನೇ ಪುಟದಿಂದ)** ರೂಪಿಸುವ ಷಡ್ಯಂತ್ರದ ಹಿಂದಿದ್ದಾರೆ, ಅವರ ಜೊತೆ ಇನ್ನೊಬ್ಬರು ಸೇರಿಕೊಂಡಿದ್ದಾರೆ. ಸಮಯ ಬಂದಾಗ ಎಲ್ಲವನ್ನೂ ಬಹಿರಂಗ ಪಡಿಸುತ್ತೇನೆ. ನಾನು ಈ ಬಗ್ಗೆ ಖಾಸಗಿ ಸಂಸ್ಥೆಯಿಂದ ತನಿಖೆ ನಡೆಸಿದ್ದು, ಈ ಮಹಾನ್ ನಾಯಕರ ಪಾತ್ರದ ಬಗ್ಗೆ ವರದಿ ಸಿಕ್ಕಿದೆ ಎಂದು ಹೇಳಿದ್ದಾರೆ.

ಯಶವಂತಪುರದ ಸಮೀಪದ ಫ್ಲಾಟ್ ಹಾಗೂ ಓರಿಯನ್ ಮಾಲ್‌ಗೆ ಅಂಟಿಕೊಂಡಿರುವ 3 ಮತ್ತು 4 ನೇ ಮಹಡಿಯ ಫ್ಲಾಟ್‌ನಲ್ಲಿ ಈ ಸಿ.ಡಿ. ಸಿದ್ಧಗೊಂಡಿದೆ. ಅಲ್ಲದೆ, ಹುಳಿಮಾವು ಸಮೀಪ ಇರುವ ಮನೆಯೊಂದರಲ್ಲಿ ಈ ಇಷ್ಟೂ ಮಂದಿ ಸಭೆ ಸೇರಿ, ಅಂತಿಮವಾಗಿ ನನ್ನ ವಿರುದ್ಧದ ಸಿ.ಡಿ. ಯನ್ನು ಹೊರಹಾಕಿದ್ದಾರೆ ಎಂದವರು ಆರೋಪಿಸಿದ್ದಾರೆ.

ಆದರೆ, ಆ 'ಮಹಾನ್ ನಾಯಕ' ಯಾರು ಎಂಬ ಗುಟ್ಟನ್ನು ಬಿಟ್ಟುಕೊಡದ ಜಾರಕಿಹೊಳಿ, ಇದರ ಹಿಂದೆ ಯಾರಿದ್ದಾರೆ ಎಂಬುದು ನನಗೆ ಗೊತ್ತು, ಅದರೆ ಈ ಸಂದರ್ಭದಲ್ಲಿ ನಾನು ಅವರ ಹೆಸರನ್ನು ಬಹಿರಂಗಪಡಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಾನು ಸಚಿವನಾದ ನಂತರ ಮಹಾನಾಯಕನೊಬ್ಬ ಇವನು ಮೂರು ತಿಂಗಳು ಇಲಾಖೆ ನಡೆಸುವುದಿಲ್ಲ ಎಂದು ನನಗೆ ಸವಾಲು ಹಾಕಿದ್ದ. ನಾನು ರಾಜ್ಯದ ಜನತೆ ಮೆಚ್ಚುವಂತೆ ಕೆಲಸ ಮಾಡಿದ್ದೇನೆ. ನನ್ನ ವಕೀಲರು ನನಗೆ ಹೆಸರುಗಳನ್ನು ಬಹಿರಂಗಪಡಿಸಬಾರದೆಂದು ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಇದು ನೂರಕ್ಕೆ ನೂರರಷ್ಟು ನಕಲಿ ಸಿ.ಡಿ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಒಂದು ವೇಳೆ ಅಂತಹ ಕೆಟ್ಟ ಕೆಲಸ ಮಾಡಿದ್ದರೆ ನಾಡಿನ ಅಧಿದೇವತೆ ಚಾಮುಂಡೇಶ್ವರಿ ಸಾನ್ನಿಧ್ಯಕ್ಕೆ ಹೋಗಲು ಸಾಧ್ಯವಿರುತ್ತಿತ್ತೇ? ಎಂದು ಪ್ರಶ್ನಿಸಿದರು.

ನಾನು ಯಾವ ತಪ್ಪು ಮಾಡಿಲ್ಲ ಎಂದ ಮೇಲೆ ಹೆದರುವ ಪ್ರಶ್ನೆಯೇ ಬರುವುದಿಲ್ಲ. ಯಾವುದೇ ತನಿಖೆ ಎದುರಿಸಲು ನಾನು ಸಿದ್ಧನಿದ್ದೇನೆ. ನಾವು ರಾಜ ಕುಟುಂಬದವರು. ರಾಜಕಾರಣ, ಸಚಿವ ಸ್ಥಾನಕ್ಕಿಂತ ಕುಟುಂಬದ ಮರ್ಯಾದೆ ಮುಖ್ಯ. ಹೋಗಿರುವ ಮರ್ಯಾದೆ ಬರುವವರೆಗೂ ಬಿಡುವುದಿಲ್ಲ ಎಂದು ಗುಡುಗಿದರು.

ನನ್ನ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಸಲು 100 ಕೋಟಿ ಖರ್ಚು ಮಾಡಲಾಗಿದೆ, ಯುವತಿಗೆ ವಿದೇಶದಲ್ಲಿ ಎರಡು ಅಪಾರ್ಟ್‌ಮೆಂಟ್ ಹಾಗೂ 5 ಕೋಟಿ ಹಣ ನೀಡಲಾಗಿದೆ. ಇದರಲ್ಲಿ ಇನ್ನು ಕೆಲವರು ಶಾಮೀಲಾಗಿದ್ದಾರೆ ಎಂದು ದೂರಿದರು.

ಕಷ್ಟಕಾಲದಲ್ಲಿದ್ದ ನನಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ದೂರವಾಣಿ ಕರೆ ಮಾಡಿ ಧೈರ್ಯ ತುಂಬಿದರು. ಇದೇ ವೇಳೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ. ರೇವಣ್ಣ ಮತ್ತಿತರೆ ಪಕ್ಷಗಳ ಮುಖಂಡರು ನನ್ನ ಪರವಾಗಿ ಮಾತನಾಡಿದ್ದು ಧೈರ್ಯವನ್ನು ಹೆಚ್ಚಿಸಿತ್ತು. ನನ್ನ ಮೇಲೆ ಎಲ್ಲ ಪಕ್ಷದವರಿಗೂ ಗೌರವವಿದೆ. ನಾನು ಯಾರ ವಿರುದ್ಧವೂ ಹಗೆತನ ಮಾಡಿಲ್ಲ. ಬಿಜೆಪಿ ಸರ್ಕಾರ ರಚನೆ ಮಾಡಲು ನಾನೇ ಕಾರಣನಾಗಿದ್ದೆ. ಹೀಗಾಗಿ ನನ್ನ ಮುಖಕ್ಕೆ ಮಸಿ ಬಳಿಯಲು ಷಡ್ಯಂತ್ರ ನಡೆಸಿದ್ದಾರೆ ಎಂದು ಆಪಾದಿಸಿದರು.

ನಾನೇ ಸ್ವಯಂ ಪ್ರೇರಿತನಾಗಿ ರಾಜೀನಾಮೆ ಕೊಟ್ಟಿರುವೆ. ಈಗಲೂ ನಾನು ಸಚಿವ ಸ್ಥಾನ ಕೊಡಿ ಎಂದು ಕೇಳುವುದಿಲ್ಲ. ಪಕ್ಷಕ್ಕೆ ಆಗಲೀ, ಸರ್ಕಾರಕ್ಕೇ ಆಗಲೀ ಮುಜುಗರ ತರುವ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

# ದೂಡಾ ಕಚೇರಿ ಗಣಕೀಕರಣ ಸಭೆ



ದಾವಣಗೆರೆ, ಮಾ. 9- ದೂಡಾದ ಪ್ರತಿಯೊಂದು ಸೇವೆಯು ಹಾಗೂ ವಿನ್ಯಾಸಗಳು (ಪ್ಲಾನ್) ಸಾರ್ವಜನಿಕರಿಗೆ ಸುಲಭವಾಗಿ ಸಿಗು ವಂತೆ ಮಾಡಲು ಹಾಗೂ ದೂಡಾ ಕಛೇರಿಯನ್ನು ಸಂಪೂರ್ಣ ಗಣಕೀಕರಣ ಮಾಡುವ ಕುರಿತು ಮಂಗಳವಾರ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿ ಯೊಂದಿಗೆ ದೂಡಾ ಕಚೇರಿಯಲ್ಲಿ ಸಭೆ ನಡೆಯಿತು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮತ್ತು ಆಯುಕ್ತ ಬಿ.ಟಿ.ಕುಮಾರಸ್ವಾಮಿ ಇವರ ನೇತೃತ್ವದಲ್ಲಿ ಜರುಗಿದ ಸಭೆಯಲ್ಲಿ ಪ್ರಾಧಿಕಾರದ ಎಲ್ಲಾ ಶಾಖೆಯ ಮುಖ್ಯಸ್ಥರು ಮತ್ತು ಅಧಿಕಾರಿಗಳು ಹಾಗೂ ಬೆಂಗಳೂರಿನಿಂದ ಆಗಮಿಸಿದ ಸಾಫ್ಟ್‌ವೇರ್ ಕಂಪನಿಯ ಪ್ರತಿನಿಧಿಗಳು ಹಾಜರಿದ್ದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪ್ರತಿನಿತ್ಯ ನೂರಾರು ಜನ ದಾಖಲೆಗಳನ್ನು ಅರಸಿ ಬರುತ್ತಿರುತ್ತಾರೆ ಹಾಗೂ ಸಾರ್ವಜನಿಕರಿಗೆ ದಾವಣಗೆರೆ ನಗರದ ಅಥವಾ ದೂಡಾ ವ್ಯಾಪ್ತಿಯಲ್ಲಿರುವ ನಿವೇಶನಗಳಲ್ಲಿ ಯಾವುದು ಅನುಮೋದಿತ, ಯಾವುದು ಅನುಮೋದಿತ ವಲ್ಲ ಎಂಬುದು ತಿಳಿಯುವುದು ಕಷ್ಟಕರವಾಗಿರುತ್ತದೆ.

ಅನೇಕ ಮುಗ್ದ, ಬಡವ, ಮಧ್ಯಮ ವರ್ಗದವರಿಗೆ ಸಾಕಷ್ಟು ಅನಾನುಕೂಲಗಳು ಆಗುತ್ತಿರುವುದು ಮತ್ತು ಎಷ್ಟೋ ಕಡೆ ಪಾರ್ಕ್, ರಸ್ತೆ, ಸಿ.ಎ. ನಿವೇಶನಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ಹಾಗೂ ಹಾಲಿ ಇರುವ ಎಲ್ಲಾ ದಾಖಲೆಗಳನ್ನು ಗಣಕೀಕರಣಗೊಳಿಸಿ, ಪರಿಶೀಲಿಸಿ ಅವುಗಳ ನೈಜತೆ ಖಚಿತಪಡಿಸಿಕೊಂಡು ವೆಬ್ ಸೈಟ್ ಮೂಲಕ ಪ್ರತಿಯೊಂದು ನಕ್ಷೆಯು ಸಾರ್ವಜನಿಕ ವೀಕ್ಷಣೆಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಇಂದು ಸಾಫ್ಟ್‌ವೇರ್ ಕಂಪನಿಯ ಪ್ರತಿನಿಧಿಗಳೊಂದಿಗೆ ಚರ್ಚಿಸಲಾಯಿತು.

ಮುಂಬರುವ ದಿನಗಳಲ್ಲಿ ದೂಡಾ ಕಛೇರಿಯನ್ನು ಸಂಪೂರ್ಣವಾಗಿ ಪೇಪರ್‌ಲೆಸ್ ಆಫೀಸ್ (Paper-less Office) ಮಾಡುವ ನಿಟ್ಟಿನಲ್ಲಿ ಅಧಿಕಾರಿ ಮತ್ತು ನೌಕರರಿಗೆ ಈ ಬಗ್ಗೆ ಹೆಚ್ಚಿನ ತರಬೇತಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಪೂರಕ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿಯೂ ಸಾಫ್ಟ್‌ವೇರ್ ತಂತ್ರಜ್ಞರೊಂದಿಗೆ ಚರ್ಚಿಸಲಾಯಿತು ಹಾಗೂ ಆದಷ್ಟು ಬೇಗ ಇದನ್ನು ದೂಡಾ ಕಛೇರಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಮತ್ತು ಇದಕ್ಕೆ ಬೇಕಾಗುವ ಆರ್ಥಿಕ ವೆಚ್ಚವನ್ನು ಈ ಬಾರಿಯ ಆಯ-ವ್ಯಯದಲ್ಲಿ ಮೀಸಲಿಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಪ್ರಾಧಿಕಾರದ ಸದಸ್ಯ ಜಯರುದ್ರೇಶ್, ಜಂಟಿ ನಿರ್ದೇಶಕ ಎಂ.ಅಣ್ಣಪ್ಪ, ಸಹಾಯಕ ನಿರ್ದೇಶಕ ಬಿ.ರೇಣುಕಾಪ್ರಸಾದ್, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಹೆಚ್. ಶ್ರೀಕರ್, ಸಹಾಯಕ ಇಂಜಿನಿಯರಾದ ಎನ್.ಸುಜಯ್‌ಕುಮಾರ್ ಮತ್ತು ನಗರ ಯೋಜಕರಾದ ಭರತಕುಮಾರ್.ಟಿ.ಪಿ ಸಭೆಯಲ್ಲಿ ಉಪಸ್ಥಿತರಿದ್ದರು.

# ಕಾರ್ಖಾನೆ, ಬಾಯ್ಲರ್‌ಗಳ ಇಲಾಖೆ ಉಪನಿರ್ದೇಶಕ, ಕಚೇರಿ, ಮನೆ ಮೇಲೆ ಎಸಿಬಿ ದಾಳಿ

ದಾವಣಗೆರೆ, ಮಾ.9- ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಯ ಉಪ ನಿರ್ದೇಶಕರ ಕಚೇರಿ ಹಾಗೂ ಉಪ ನಿರ್ದೇಶಕರ ಬೆಂಗಳೂರಿನ ಸಂಜಯ ನಗರ ನಿವಾಸ ಸೇರಿದಂತೆ ಮೂರು ಕಡೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ತಂಡವು ಇಂದು ಏಕಕಾಲಕ್ಕೆ ದಾಳಿ ನಡೆಸಿದೆ.

ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧೀಕ್ಷಕ ಜಯಪ್ರಕಾಶ್ ನೇತೃತ್ವದ ತಂಡವು ನಗರದ ಹಳೆ ಪಿ.ಬಿ. ರಸ್ತೆಯ ಹಳೆ ಅಪೂರ್ವ ಹೋಟೆಲ್ ಹಿಂಭಾಗದಲ್ಲಿರುವ ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಇಲಾಖೆಯ ಉಪ ನಿರ್ದೇಶಕ ಕೆ.ಎಂ. ಪ್ರಥಮ್ ಅವರ ನಗರದ ಇಲಾಖೆ ಕಚೇರಿ ಹಾಗೂ ಬೆಂಗಳೂರಿನ ಸಂಜಯ್ ನಗರದಲ್ಲಿ ಸ್ವಂತ ಮನೆ ಹಾಗೂ ಅವರ ತಾಯಿಯ ಮನೆಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ಅಕ್ರಮ ಆಸ್ತಿ, ದಾಖಲೆ ಪತ್ರಗಳು ಪರಿಶೀಲಿಸಿ, ಇತರೆ ಮಾಹಿತಿಯನ್ನು ಕಲೆ ಹಾಕಿತು. ದಾಳಿ ಬಗ್ಗೆ ಯಾವುದೇ ಮಾಹಿತಿ ಬಿಟ್ಟು ಕೊಟ್ಟಿಲ್ಲ.

ಅಕ್ರಮ ಆಸ್ತಿ ಗಳಿಕೆ, ಭ್ರಷ್ಟಾಚಾರದ ಆರೋಪದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆ ಭ್ರಷ್ಟ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿದ್ದು, ಈ ಪೈಕಿ ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಇಲಾಖೆ ಉಪ ನಿರ್ದೇಶಕ ಕೆ.ಎಂ. ಪ್ರಥಮ್ ನಿವಾಸದ ಮೇಲೆಯೂ ದಾಳಿಯಾಗಿದ್ದು, ದಾಖಲೆ, ಕಡತಗಳು, ಆಸ್ತಿ ಕುರಿತಂತೆ ಪರಿಶೀಲನೆ ನಡೆಸಿರುವುದಾಗಿ ಮೂಲಗಳಿಂದ ತಿಳಿದು ಬಂದಿದೆ.

# 9.30 ಲಕ್ಷ ಮೌಲ್ಯದ ಅವಧಿ ಮೀರಿದ ಮದ್ಯ ನಾಶ



ದಾವಣಗೆರೆ, ಮಾ.9- ಅಬಕಾರಿ ಇಲಾಖೆಯ ಕರ್ನಾಟಕ ಪಾನೀಯ ನಿಗಮದ (ಕೆಎಸ್ ಬಿಸಿಎಲ್)ಲಿಕ್ಕರ್ ಡಿಪೋದಲ್ಲಿ ಮಾರಾಟವಾಗದೇ ಬಾಕಿ ಉಳಿದಿದ್ದ ಅವಧಿ ಮೀರಿದ್ದ 9.30 ಲಕ್ಷ ಮೌಲ್ಯದ ಮದ್ಯವನ್ನು ನಾಶ ಮಾಡಲಾಗಿದೆ.

ಒಟ್ಟು 579 ಪೆಟ್ಟಿಗೆ 31 ಬಾಟಲ್ ಸೇರಿ 4,564,390 ಲೀಟರ್ ಬಿಯರ್ ದಾಸ್ತಾನನ್ನು ಇಂದು ಮಧ್ಯಾಹ್ನ ಅಬಕಾರಿ ಉಪಆಯುಕ್ತ ಬಿ. ಶಿವಪ್ರಸಾದ್, ಉಪ ಅಧೀಕ್ಷಕ ಕೆ.ಎಲ್. ನಾಗರಾಜ್, ಕೆಎಸ್ ಬಿಸಿಎಲ್ ಡಿಪೋ ವ್ಯವಸ್ಥಾಪಕ ಕಲ್ಲೇಶಪ್ಪ ನೇತೃತ್ವದಲ್ಲಿ ಡಿಪೋ ಆವರಣದಲ್ಲಿ ನಾಶ ಮಾಡಲಾಯಿತು. ಒಟ್ಟು 9,30,699 ರೂ. ಮೌಲ್ಯದ ಮದ್ಯ ನಾಶಪಡಿಸಲಾಗಿದೆ.

# 2 ಲಕ್ಷಕ್ಕೂ ಅಧಿಕ ಮೌಲ್ಯದ ಪಡಿತರ ಅಕ್ಕಿ ವಶ

ದಾವಣಗೆರೆ, ಮಾ.9- ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ 2 ಲಕ್ಷದ 25 ಸಾವಿರ ಮೌಲ್ಯದ ಪಡಿತರ ಅಕ್ಕಿಯನ್ನು ಇಂದು ಹರಿಹರ ಗ್ರಾಮಾಂತರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಮಾರ್ಗದರ್ಶನದಲ್ಲಿ ಗ್ರಾಮಾಂತರ ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ ನೇತೃತ್ವದಲ್ಲಿ ಹರಿಹರ ವೃತ್ತ ನಿರೀಕ್ಷಕ ಯು. ಸತೀಶ್ ಕುಮಾರ, ಹರಿಹರ ತಾಲ್ಲೂಕು ಕಛೇರಿ ಆಹಾರ ಶಿರಸ್ತೇದಾರ್ ಯು.ಆರ್. ರಮೇಶ್, ಹರಿಹರ ಗ್ರಾಮಾಂತರ ಪಿಎಸ್‌ಐ ಮಹಮದ್ ಸೈಪುದ್ದೀನ್ ಮತ್ತು ಸಿಬ್ಬಂದಿಗಳಾದ ಮಹಮದ್ ರಸೂಲ್, ಲಿಂಗರಾಜ್, ಹನುಮಂತಪ್ಪ, ಕರಿಯಪ್ಪ, ಕೃಷ್ಣ, ವೆಂಕಟೇಶ್, ಶ್ರೀಧರ್ ಬಣಕಾರ್, ಹರೀಶ್ ಒಳಗೊಂಡ ತಂಡವು ರಾಣೆಬೆನ್ನೂರಿನಿಂದ ತುಮಕೂರಿಗೆ ಹರಿಹರ ಬೈಪಾಸ್ ಬಳಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-48ರ ಮಾರ್ಗವಾಗಿ ಲಾರಿಯಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ವೇಳೆ ದಾಳಿ ನಡೆಸಿ, ತಲಾ 50 ಕೆಜಿವುಳ್ಳ 300 ಪ್ಲಾಸ್ಟಿಕ್ ಚೀಲಗಳ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿದೆ.

# 70 ಸಾವಿರ ರೂ. ಮೌಲ್ಯದ ಗಾಂಜಾ ವಶ

ದಾವಣಗೆರೆ, ಮಾ.9- ಗಾಂಜಾ ಮಾರಾಟ ಮತ್ತು ಸೇವನೆಗೆ ಅವಕಾಶ ನೀಡಿದ್ದ ಸ್ಥಳದ ಮೇಲೆ ದಾಳಿ ನಡೆಸಿರುವ ವಿದ್ಯಾನಗರ ಪೊಲೀಸರು 7 ಮಂದಿಯನ್ನು ಬಂಧಿಸಿ 70 ಸಾವಿರ ಮೌಲ್ಯದ 4 ಕೆ.ಜಿ. 522 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಶಂಕರ್ ವಿಹಾರ್ ಲೇಔಟ್ ನ ಚಂದ್ರಶೇಖರ್ (27), ದೇವರಾಜ್ ಅರಸ್ ಬಡಾವಣೆ ಎ ಬ್ಲಾಕ್ 7ನೇ ಕ್ರಾಸ್ ನ ಶಾರೀಕ್ (29), ವಿದ್ಯಾನಗರದ ಹೆಚ್. ಸತೀಶ್ ಕುಮಾರ್, ಹಾವೇರಿ ಜಿಲ್ಲೆಯ ಗುರುದತ್ತ ಅಲಿಯಾಸ್ ಗುರು (29), ರಾಯಚೂರು ಜಿಲ್ಲೆ ಕರಡಿಗುಡ್ಡ ಗ್ರಾಮದ ಶಿವಕುಮಾರ್ ಅಲಿಯಾಸ್ ಶಿವು (25), ಅರ್ಜುನ್ ನಾಯಕ್ (26), ರಾಯಚೂರು ಜಿಲ್ಲೆ ಬಂಗಾಳಿ ಕ್ಯಾಂಪ್ ನ ಶಿವಶಂಕರ್ ಗಾಯಿನ್ (34) ಬಂಧಿತರು.

ನಗರದ ಕುಂದುವಾಡ ರಸ್ತೆ ಬಸವೇಶ್ವರ ಬಡಾವಣೆಯ ಮನೆಯೊಂದರ 2ನೇ ಮಹಡಿಯ ರೂಂನಲ್ಲಿ ಅಕ್ರಮವಾಗಿ ಗಾಂಜಾ ದಾಸ್ತಾನು ಮಾಡಿ ಮಾರಾಟ ಹಾಗೂ ಸೇವನೆಗೆ ಅವಕಾಶ ನೀಡಿದ್ದ ಹಿನ್ನೆಲೆಯಲ್ಲಿ ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್, ನಗರ ಡಿವೈಎಸ್ಪಿ ನಾಗೇಶ್ ಐತಾಳ್ ಮಾರ್ಗದರ್ಶನದಲ್ಲಿ ದಕ್ಷಿಣ ವೃತ್ತ ಸಿಪಿಐ ಗುರುಬಸವರಾಜ್, ವಿದ್ಯಾನಗರ ಪೊಲೀಸ್ ಠಾಣೆ ಪಿಎಸ್‌ಐ ರೂಪ ತೆಂಬದ್ ಮತ್ತು ಸಿಬ್ಬಂದಿಗಳಾದ ಮಂಜುನಾಥ, ನರೇಂದ್ರ ಸ್ವಾಮಿ, ಗೋಪಿನಾಥ ನಾಯ್ಕ, ಗಿರಿಧರ್ ನಾಯ್ಕ, ಬಸವರಾಜ, ಯೋಗೀಶ್ ನಾಯ್ಕ, ಮಂಜುನಾಥ, ಗುಡ್ಡಪ್ಪ, ಆನಂದ್, ಮಂಜುನಾಥ ಒಳಗೊಂಡ ತಂಡ ದಾಳಿ ಮಾಡಿದೆ.

## ಒಂದಿಷ್ಟು ಉಸಿರಾಡಲು ಬಿಡು



ಅದೇನು ಸಡಗರ, ಅದೇನು ಸಂಭ್ರಮ
ಎಲ್ಲೆಡೆ ಮಹಿಳೆಗೆ ಮಾನ ಸನ್ಮಾನ
ಮಹಿಳಾ ದಿನಾಚರಣೆಯ ಮಾರ್ಚ್ 8 ರಂದು
ಬಣ್ಣ ಬಣ್ಣದ ಮಾತುಗಳು ಹಾರ ತುರಾಯಿಗಳು
ಅದೇನು ಹೆಣ್ಣನ್ನು ಹೊಗಳುವ ಪರಿ

ಓ ಹೆಣ್ಣೆ ಇದೆಲ್ಲವೂ ದಿಟವೆಂದು ನಂಬದಿರು
ಇದೆಲ್ಲವೂ ಒಂದು ದಿನದ ಗೌರವ ಮಾತ್ರ.
ಎಷ್ಟೊಂದು ವೈಭವೀಕರಣ, ಅರಿಯಲಾರೆ
ಇದು ಗಂಡು ತನ್ನ ಸ್ವಾರ್ಥ ಸಾಧನೆಗೆ ಮಾಡಿರುವ ಸಂಚೆಂದು

ಬಲಿಯಾಗದಿರು ಸೀತೆ ಸಾವಿತ್ರಿ ಅಹಲ್ಯೆ ಎಂಬ ಹೊಗಳಿಕೆಗೆ
ನಂಬದಿರು ತೋರಿಕೆಯ ಪ್ರೀತಿ ಡಂಭಾಚಾರವ
ಸೀತೆ ಅನುಭವಿಸಲಿಲ್ಲವೇ 14 ವರ್ಷಗಳ ವನವಾಸ
ಲವಕುಶರೊಂದಿಗೆ ಪರಿತ್ಯಕ್ತೆಯ ಬದುಕ

ದ್ರೌಪದಿ ಬೇಡಲಿಲ್ಲವೇ ಶ್ರೀ ಕೃಷ್ಣನ ಮಾನ ರಕ್ಷಣೆಗಾಗಿ
ಕಲ್ಲಾಗಲಿಲ್ಲವೇ ಅಹಲ್ಯೆ ತನ್ನದಲ್ಲದ ತಪ್ಪಿಗಾಗಿ
ಬೇಡ ನನಗೆ ಯಾವ ಪಟ್ಟ ಬಿರುದು ಬಾವಲಿಗಳು
ನಾನು ಹೆಣ್ಣಾಗಿ ಬೇಡುವುದಿಷ್ಟು
ನನ್ನನ್ನು ಒಬ್ಬ ವ್ಯಕ್ತಿಯಾಗಿ ಬದುಕಲು ಬಿಡು

ನನ್ನಲ್ಲೂ ಹಲವು ಸುಂದರ ಕನಸುಗಳಿವೆ
ನಿನ್ನ ಭೋಗ ಲಾಲಸೆಯ ವಸ್ತುವಾಗಲಾರೆ
ಒಂದಿಷ್ಟು ಹೊರಗಿನ ಗಾಳಿಯ ಉಸಿರಾಡಲು ಬಿಡು

- **ಮಲ್ಲಮ್ಮ ನಾಗರಾಜ್**, ದಾವಣಗೆರೆ.

# ಮತ್ತೆ ಸಾರಿಗೆ ನೌಕರರ ಮುಷ್ಕರ

**(1ನೇ ಪುಟದಿಂದ)** ಗೌರವ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಆನಂದ್ ಸೇರಿದಂತೆ ವಿವಿಧ ಪದಾಧಿಕಾರಿಗಳ ನೇತೃತ್ವದಲ್ಲಿ ಇಂದು ಮಹತ್ವದ ಸಭೆ ನಡೆಸಿ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಸಾರಿಗೆ ನೌಕರರಿಗೆ ಸರಿಯಾಗಿ ವೇತನ ನೀಡುತ್ತಿಲ್ಲ. ಹಿರಿಯ ಅಧಿಕಾರಿಗಳಿಂದ ಕಿರುಕುಳ ತಪ್ಪುತ್ತಿಲ್ಲ. ಕೊರೊನಾ ವಾರಿಯರ್ಸ್ ಆಗಿ ಕೆಲಸ ನಿರ್ವಹಿಸಿದ ಸಂದರ್ಭದಲ್ಲಿ ಸಾವನ್ನಪ್ಪಿದ ಸಾರಿಗೆ ನೌಕರರಿಗೆ 30 ಲಕ್ಷ ಪರಿಹಾರ ನೀಡುವಲ್ಲಿ ವಿಳಂಬ ಮಾಡಲಾಗುತ್ತಿದೆ ಎಂದು ಚಂದ್ರಶೇಖರ್ ಹೇಳಿದ್ದಾರೆ.

ತರಬೇತಿ ಅವಧಿಯನ್ನು ಕಡಿತಗೊಳಿಸಲಿಲ್ಲ. ಕಾರ್ಯಸಾಧು ಬೇಡಿಕೆಗಳನ್ನು ಸರ್ಕಾರ ಈಡೇರಿಸಲಿಲ್ಲ. ಪ್ರತಿಭಟನೆ ನಡೆಸಿ ಮೂರು ತಿಂಗಳಾ ದರೂ ಯಾವುದೇ ಬೇಡಿಕೆ ಈಡೇರಿಸಲು ಸರ್ಕಾರ ಮನಸ್ಸು ಮಾಡುತ್ತಿಲ್ಲ. ಹೀಗಾಗಿ ಅನಿವಾರ್ಯವಾಗಿ ಮತ್ತೆ ನಾವು ಪ್ರತಿಭಟನೆಗೆ ಇಳಿಯ ಲೇಬೇಕಾಗಿದೆ ಎಂಬ ಉದ್ದೇಶದಿಂದ ಸಭೆ ಸೇರಿ ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸುತ್ತೇವೆ ಎಂದವರು ತಿಳಿಸಿದ್ದಾರೆ.

ಸರ್ಕಾರದ ಮುಂದೆ ಹಲವಾರು ಬಾರಿ ಮನವಿ ಮಾಡಿದೆವು. ಸರ್ಕಾರ ಮನವಿಯನ್ನು ಈವರೆಗೂ ಪುರಸ್ಕಾರ ಮಾಡಿಲ್ಲ. ಬಜೆಟ್‌ನಲ್ಲೂ ಕೂಡ ಆಯೋಗದ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಹೀಗಾಗಿ ನಾವು ಹೋರಾಟ ಮಾಡಿಯೇ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಮಾ.15ರವರೆಗೆ ಸಮಯಾವಕಾಶವಿದೆ. ಅಷ್ಟರೊಳಗೆ ನಮ್ಮ ಬೇಡಿಕೆ ಈಡೇರಿದರೆ ನಾವು ಹೋರಾಟಕ್ಕೆ ಇಳಿಯುವುದಿಲ್ಲ. ಇಲ್ಲದಿದ್ದರೆ ಅನಿವಾರ್ಯವಾಗಿ ನಾವು ಹೋರಾಟ ಮಾಡಬೇಕಾಗುತ್ತದೆ. ಕಳೆದ ಬಾರಿ ಏಕಾಏಕಿ ಹೋರಾಟಕ್ಕಿಳಿದೆವು. ಯಾವುದೇ ಪೂರ್ವಭಾವಿ ಸಿದ್ಧತೆಗಳಿರಲಿಲ್ಲ. ಈಗ ನಾವು ಎಲ್ಲ ಪೂರ್ವಭಾವಿ ಸಿದ್ದತೆಗಳನ್ನು ಮಾಡಿಕೊಂಡು ಹೋರಾಟ ಮಾಡಿ ಸರ್ಕಾರಕ್ಕೆ ಬಿಸಿ ಮುಟ್ಟಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

# ಲ್ಯಾನ್ಸೆಟ್ ವರದಿ

**(1ನೇ ಪುಟದಿಂದ)** ಎರಡನೇ ಹಂತದ ಪ್ರಯೋಗದಿಂದ ತಿಳಿದು ಬಂದಿದೆ ಎಂದು ದಿ ಲ್ಯಾನ್ಸೆಟ್ ಇನ್ಫೆಕ್ಷನ್ ಡಿಸೀಸಸ್ ನಿಯತಕಾಲಿಕದ ವರದಿಯಲ್ಲಿ ತಿಳಿಸಲಾಗಿದೆ. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ (ಐ.ಸಿ.ಎಂ.ಆರ್.) ಜೊತೆಗೂಡಿ ಭಾರತ್ ಬಯೋಟೆಕ್ ಈ ಲಸಿಕೆಯನ್ನು ರೂಪಿಸಿದೆ. ಲಸಿಕೆಯ ತುರ್ತು ಬಳಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಕೊವ್ಯಾಕ್ಸಿನ್‌ಗೆ ತುರ್ತು ಅನುಮತಿ ನೀಡಿದ್ದ ಹಲವಾರು ಪರಿಣಿತರಲ್ಲಿ ಕಳವಳಕ್ಕೆ ಕಾರಣವಾಗಿತ್ತು. ಇತ್ತೀಚೆಗಷ್ಟೇ ಮೂರನೇ ಹಂತದ ಪ್ರಯೋಗದ ಫಲಿತಾಂಶ ಪ್ರಕಟಿಸಿದ್ದ ಕೊವ್ಯಾಕ್ಸಿನ್, ಲಸಿಕೆ ಶೇ.81ರಷ್ಟು ಪರಿಣಾಮಕಾರಿ ಎಂದು ತಿಳಿಸಿತ್ತು.


# ಠಾಣೆಯಲ್ಲಿ ದೂರು

**(1ನೇ ಪುಟದಿಂದ)** ಪ್ರಕಾರ ನಡೆಯು ತ್ತದೆ, ಯಾರನ್ನೂ ರಕ್ಷಿಸುವ ಅಗತ್ಯವಿಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗು ವುದು ಎಂದರು. ದೂರು ಬಂದ ನಂತರ ಪೊಲೀಸರು ವಿಚಾರಣೆ ಆರಂಭಿಸಿದ್ದಾರೆ, ಎಲ್ಲವನ್ನೂ ಕಾನೂನು ಪ್ರಕಾರ ತನಿಖೆಗೆ ಒಳಪಡಿಸಲಾಗುತ್ತದೆ ಎಂದರು.

## ವಿಶೇಷ ಪೂಜೆ

ದಾವಣಗೆರೆ, ಮಾ.9- ಕೆ.ಟಿ.ಜೆ. ನಗರದ ಶ್ರೀ ಮಲ್ಲಿಕಾರ್ಜುನ ದೇವ ಸ್ಥಾನದಲ್ಲಿ ನಾಡಿದ್ದು ದಿನಾಂಕ 11 ರ ಗುರುವಾರ ಸಂಜೆ 7 ಕ್ಕೆ ಶಿವರಾತ್ರಿ ಪೂಜೆ, ಫಲಹಾರ ಏರ್ಪಡಿಸಿದೆ.

## ಕಮಲಮ್ಮ ಮಡಿವಾಳರ ನಿಧನ



ದಾವಣಗೆರೆ ಭಗತ್‌ಸಿಂಗ್ ನಗರ 9ನೇ ಕ್ರಾಸ್ ವಾಸಿ ದಿ. ಬಸಪ್ಪನವರ ಪತ್ನಿ ಕಮಲಮ್ಮ (82) ಇವರು ದಿನಾಂಕ 9.03.2021 ರ ಮಂಗಳವಾರ ಸಂಜೆ 4.40ಕ್ಕೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.03.2021 ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಎಸ್ಟಿ ಮೀಸಲಾತಿ : 16 ಕ್ಕೆ ಮತ್ತೆ ಸಭೆ ನಡೆಸಿ ಅಂತಿಮ ತೀರ್ಮಾನ



ಬೆಂಗಳೂರು, ಮಾ.9 - ಎಸ್ಟಿ ಮೀಸಲಾತಿ ಹೆಚ್ಚಳ ವಿಚಾರವಾಗಿ ಕುರಿತು ಚರ್ಚಿಸಲು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಂಗಳವಾರ ಸಂಜೆ ಬೆಂಗಳೂರಿನ ಕುಮಾರ ಕೃಪ ಅತಿಥಿ ಗೃಹದಲ್ಲಿ ಕರೆದಿದ್ದ ಸಭೆಯಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ.


ಅಂತಿಮವಾಗಿ ಮಾ.16 ರ ಮಂಗಳವಾರ ಸಂಜೆ 6 ಗಂಟೆಗೆ ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಮತ್ತೆ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ.

ಸಭೆಯಲ್ಲಿ ಶಾಸಕರು, ಮಾಜಿ ಶಾಸಕರು, ವಿವಿಧ ಸಂಘಟನೆಗಳ ಹೋರಾಟಗಾರರು, ಸಮಾಜದ ಮುಖಂಡರು ಪಾಲ್ಗೊಂಡಿದ್ದರು. ಸಭೆಯಲ್ಲಿ ಮಾತನಾಡಿದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು 3ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸಮಾಜಕ್ಕೆ ಕೊಟ್ಟ ಮಾತಿನಂತೆ ಮಾ.9 ರ ಒಳಗಾಗಿ ಎಸ್ಟಿ ಮೀಸಲಾತಿ ಪ್ರಮಾಣವನ್ನು ಶೇ 7.5 ಕ್ಕೆ ಹೆಚ್ಚಿಸಲು ಕ್ರಮಕ್ಕೆ ಕೈಗೊಳ್ಳಬೇಕಿತ್ತು. ವಿಳಂಬ ಆಗುತ್ತಿರುವ ಬಗ್ಗೆ ನಮ್ಮ ಜೊತೆಯೂ ಮಾತನಾಡಿಲ್ಲ, ಸರ್ಕಾರ ಯಾಕೆ ಈ ರೀತಿ ನಿರ್ಲಕ್ಷ್ಯ ಮಾಡುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ, ಇಂದಿನ ಸಭೆಯಲ್ಲಿ ಈ ಕುರಿತು ಸಾಕಷ್ಟು ಚರ್ಚೆಯಾಗಿದ್ದು ಮಾ. 16 ರಂದು ಮತ್ತೆ ಸಭೆ ಸೇರಿ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ. ಅಷ್ಟರೊಳಗಾಗಿ ಸರ್ಕಾರ ತನ್ನ ನಿರ್ಧಾರ ಪ್ರಕಟಿಸಲಿ ಎಂದು ಸ್ವಾಮೀಜಿ ಒತ್ತಾಯಿಸಿದ್ದಾರೆ.

## ಉಚಿತ ಬಿಲ್ವಪತ್ರೆ ವಿತರಣೆ

ದಾವಣಗೆರೆ, ಮಾ.9- ಶಿವರಾತ್ರಿ ಪ್ರಯುಕ್ತ ರುದ್ರಾಭಿಷೇಕಕ್ಕೆ ಬೇಕಾಗುವ ಪಾಥ್ಯ, ಅರ್ಘ್ಯ, ಆಚಮನ ಹಾಗೂ ಬಿಲ್ವಪತ್ರೆಯನ್ನು ಉಚಿತವಾಗಿ ಕೊಡಲಾಗುವುದು. ಕೆಟಿಜೆ ನಗರ 2ನೇ ಮೇನ್, 16ನೇ ತಿರುವಿನ (#451/2) ಎಂ. ವೀರಣ್ಣ, ಶ್ರೀ ಗುರು ರೇವಣಸಿದ್ದೇಶ್ವರ ನಿವಾಸದಲ್ಲಿ ಪಡೆಯಬಹುದು. ವಿವರಕ್ಕೆ 97403 05683ಗೆ ಸಂಪರ್ಕಿಸುವುದು.

## 26 ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಕೆ.ಎಂ.ಕಡ್ಲಯ್ಯ
ನಿವೃತ್ತ ಬಿಲ್ ಕಲೆಕ್ಟರ್, ನಗರಸಭೆ

**ನೀವು ನಮ್ಮನ್ನಗಲಿ**
**ಇಂದಿಗೆ 26 ವರ್ಷಗಳು ಗತಿಸಿದವು.**
**ಸದಾ ತಮ್ಮ ಸ್ಮರಣೆಯಲ್ಲಿರುವ**

ಪತ್ನಿ : ದಿ|| ಶ್ರೀಮತಿ ಪಾರ್ವತಮ್ಮ
ಮಕ್ಕಳಾದ : ಟಿ.ಎಂ.ರುದ್ರಯ್ಯ, ASI (Rtd.), ದಾವಣಗೆರೆ
ಟಿ.ಎಂ.ಸಿದ್ದಲಿಂಗಯ್ಯ
ಟಿ.ಎಂ.ಗಣೇಶಯ್ಯ, ಟಿ.ಎಂ. ನಾಗರಾಜಯ್ಯ
ಟಿ.ಎಂ.ಶಿವಯೋಗಿಸ್ವಾಮಿ, ಟಿ.ಎಂ.ಮಂಜುನಾಥಯ್ಯ
ಜಯಮ್ಮ, ಶಶಿಕಲಾ ಹೆಚ್.ಎಂ.ರುದ್ರೇಶ್
ಚಂದ್ರಕಲಾ ಶ್ರೀಧರಸ್ವಾಮಿ
ಸೊಸೆಯಂದಿರಾದ :
ಶ್ರೀಮತಿ ಕಮಲ, ಪೂರ್ಣಿಮ, ಲಲಿತ, ವಿಮಲಾಕ್ಷಿ, ರೇಖಾ

ಮೊಮ್ಮಕ್ಕಳಾದ : ಶ್ರೀಮತಿ ಗೀತಾರಾಣಿ, ಮಂಜುನಾಥ್ ಆರ್.ಎಂ., ಶ್ರೀಮತಿ ಸ್ವಾತಿ, ಶ್ರೀ ವಿಶ್ವಾಸ್ ತಿಪ್ಪೇಶ್, ವಾಗೀಶ್, ಕಾರ್ತಿಕ್, ನಿಖಿಲ್, ಕೃತಿಕ, ಶಿವಶಂಕರ್, ಕಿರಣ್, ರವಿಶಂಕರ್, ಯಶಸ್ ಮತ್ತು ಮರಿಮೊಮ್ಮಗ: ಅಮಯ್, ಪಿಂಕಿ ಹಾಗೂ ಸಿಬ್ಬಂದಿ ವರ್ಗ, ಸ್ವಾತಿ ಇಂಡಸ್ಟ್ರೀಸ್, ದಾವಣಗೆರೆ.

|| ಶ್ರೀ ನಾರದಮುನಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ




ದಾವಣಗೆರೆ ಸಿಟಿ, ಕೆ.ಬಿ. ಬಡಾವಣೆ, ತ್ರಿಶೂಲ್ ಶಾಲೆ ಹತ್ತಿರ, 8ನೇ ಕ್ರಾಸ್ ವಾಸಿ ದಿ. ಶ್ರೀ ಮನಿಯಪ್ಪನವರ ಮಕ್ಕಳಾದ ಶ್ರೀ ನಾಗರಾಜ್, ಶ್ರೀ ಚಂದ್ರು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 6.03.2021 ರ ಶನಿವಾರ ಬೆಳಿಗ್ಗೆ 9.50ಕ್ಕೆ ನಮ್ಮ ಪೂಜ್ಯ ತಾಯಿಯವರಾದ ದಿ. ಮಾಕನೂರು ಮುನಿಯಪ್ಪನವರ ಧರ್ಮಪತ್ನಿ

**ಶ್ರೀಮತಿ ನಾಗರತ್ನ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 10.3.2021 ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಕೆ.ಬಿ. ಬಡಾವಣೆ ದಾವಣಗೆರೆ** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರ ಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಶ್ರೀ ನಾಗರಾಜ್ ಶ್ರೀಮತಿ ಶ್ರೀ ಚಂದ್ರು, ಸಹೋದರಿಯರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

## ಬಾಬುರಾವ್ ದಾಮೋದರ್ ನಿಧನ



ದಾವಣಗೆರೆ ಚಿಗಟೇರಿ ಲೇಔಟ್, ಸಪ್ತಗಿರಿ ಸ್ಕೂಲ್ ಹಿಂಭಾಗ, 3ನೇ ಕ್ರಾಸ್, ಕುಂದುವಾಡ ರಸ್ತೆ ವಾಸಿ **ಬಾಬುರಾವ್ ದಾಮೋದರ್** ಇವರು ದಿನಾಂಕ 9.03.2021 ರ ಮಂಗಳವಾರ ಮಧ್ಯಾಹ್ನ 3.10ಕ್ಕೆ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.03.2021 ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ: **98445 50022**

## 7ನೇ ವರ್ಷದ ಪುಣ್ಯಸ್ಮರಣೆ

ನಿನ್ನೊಲುಮೆ ನಮಗಿರಲಿ ತಂದೆ...



**ದಿ|| ಬಳ್ಳಾರಿ ಎಂ. ಬಸವರಾಜಪ್ಪ**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,
ಶ್ರೀಮತಿ ದೇವಿರಮ್ಮ ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಸೊಸೆ ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು, ಕಡ್ಲೇಬಾಳು.
ಮೊ : 8660315828

# ಕಲ್ಯಾಣ ಮಂಡಳಿಯಲ್ಲಿ ಲೋಪ : ಸರಿಪಡಿಸಲು ಆಗ್ರಹ




ದಾವಣಗೆರೆ, ಮಾ.9- ಕಾರ್ಮಿಕ ಇಲಾಖೆಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿಯಲ್ಲಿರುವ ಲೋಪ ದೋಷಗಳನ್ನು ಸರಿಪಡಿಸುವಂತೆ ಹಾಗೂ ನಿಂತಿರುವ ಕೋವಿಡ್ ನ 5 ಸಾವಿರ ರೂ. ಪರಿಹಾರವನ್ನು ಕೂಡಲೇ ಮಂಜೂರು ಮಾಡುವಂತೆ ಒತ್ತಾಯಿಸಿ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ ನಗರದಲ್ಲಿಂದು ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮುಖೇನ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರದ ಮಂತ್ರಿಗಳು ಅತ್ಯಾಚಾರ ಪ್ರಕರಣಗಳಲ್ಲಿ ಪಾಲ್ಗೊಂಡು ಇಡೀ ಮಹಿಳಾ ಸಮುದಾಯಕ್ಕೆ ಕಳಂಕ ತಂದಿದ್ದಾರೆ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ದಿಕ್ಕು ತಪ್ಪಿದೆ. ತಮ್ಮ ಆಡಳಿತ ವೈಫಲ್ಯ ಮರೆಮಾಚಲು ಸರ್ಕಾರಗಳು ಇಲ್ಲಸಲ್ಲದ ಕಾನೂನು ಜಾರಿಗೆ ತರಲು ಮುಂದಾಗುತ್ತಿವೆ. ಕಾರಣ ಸರ್ಕಾರ ಈ ಕೂಡಲೇ ಜನ ವಿರೋಧಿ ನೀತಿ ಕೈಬಿಟ್ಟು ಅಭಿವೃದ್ಧಿ ಯೋಜನೆ ಜಾರಿಗೊಳಿಸಲು ಮುಂದಾಗಲಿ ಎಂದು ಕಾರ್ಮಿಕ ಮುಖಂಡ ಸಾತಿ ಸುಂದರೇಶ್ ಆಗ್ರಹಿಸಿದರು.

ಗುರುತಿನ ಚೀಟಿ ಹೊಂದಿದ ಎಲ್ಲಾ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸರ್ಕಾರಿ ಮತ್ತು ಅರೆ ಸರ್ಕಾರಿ ಜಮೀನನ್ನು ಖರೀದಿ ಮಾಡಿ ಖಾಲಿ ನಿವೇಶನ ನೀಡಿ ಮನೆ ನಿರ್ಮಾಣ ಮಾಡಿಕೊಡಬೇಕು. ಕಟ್ಟಡ ನಿರ್ಮಾಣ ಕಾರ್ಮಿಕರು ಅಪಘಾತದಿಂದಾಗಲೀ ಮತ್ತು ಸ್ವಾಭಾವಿಕವಾಗಿ ಸಾವು ಸಂಭವಿಸಿದ್ದಲ್ಲಿ ಅವರ ಅವಲಂಬಿತ ಕುಟುಂಬಕ್ಕೆ 10 ಲಕ್ಷ ಪರಿಹಾರ ಸಹಾಯಧನ ನೀಡಬೇಕು. 60 ವರ್ಷ ಪೂರೈಸಿದ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಪ್ರತಿ ತಿಂಗಳು 5 ಸಾವಿರ ರೂ. ನಿವೃತ್ತಿ ವೇತನ ನೀಡಬೇಕೆಂದು ಕಾರ್ಮಿಕ ಮುಖಂಡರ ಹೆಚ್. ಜಿ. ಉಮೇಶ್ ಒತ್ತಾಯಿಸಿದರು.

ಕಾರ್ಮಿಕರ ಕುಟುಂಬವನ್ನು ಒಳಗೊಂಡಂತೆ ಇಎಸ್ಐ ಮತ್ತು ಪಿಎಫ್ ಜಾರಿಮಾಡಬೇಕು. ಫಲಾನುಭವಿ ಮತ್ತು ಅವರ ಇಬ್ಬರು ಮಕ್ಕಳಿಗೆ ಮದುವೆ ಸಹಾಯ ಧನದ ಹಣವನ್ನು ಗುರುತಿನ ಚೀಟಿ ಹೊಂದಿದ ಫಲಾನುಭವಿಗಳಿಗೆ ನೀಡಬೇಕು. ಇಡೀ ರಾಜ್ಯಾದ್ಯಂತ ಸೇವಾಸಿಂಧು ಕೇಂದ್ರಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಗುರುತಿಸುವಿಕೆಯ ವ್ಯವಸ್ಥೆಯನ್ನು ಕಲ್ಪಿಸಬೇಕು. ತದನಂತರ ರಾಜ್ಯದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಲ್ಲದ ವ್ಯಕ್ತಿಗಳಿಗೆ ಗುರುತಿನ ಚೀಟಿ ನೀಡಲಾಗಿದೆ. ಇಂತಹ ಅನರ್ಹ ಗುರುತಿನ ಚೀಟಿ ಹೊಂದಿದ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಕಾರ್ಡನ್ನು ರದ್ದು ಮಾಡಬೇಕು. ಅಲ್ಲದೆ ಈ ಕೂಡಲೇ ಸೇವಾ ಸಿಂಧು ಕೇಂದ್ರದಲ್ಲಿ ಕಟ್ಟಡ ಕಾರ್ಮಿಕರ ನೋಂದಣಿ ಮತ್ತು ನವೀಕರಣ ಮಾಡುವುದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಹಿಂದೆ ಕಲ್ಯಾಣ ಮಂಡಳಿಯಿಂದ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕೈ ಬರಹದ ಗುರುತಿನ ಚೀಟಿಯನ್ನು ಪಡೆದಂತಹ ನಿಜವಾದ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ರಾಜ್ಯಾದ್ಯಂತ 10 ಲಕ್ಷದ 152 ಕಾರ್ಮಿಕರಿಗೆ ಕೋಡ್ 19 ಪರಿಹಾರ ಮೊತ್ತ ಮಂಜೂರು ಆಗಿರುವುದಿಲ್ಲ. ಈ ಕೂಡಲೇ ಮಂಜೂರು ಮಾಡಬೇಕು. ಫಲಾನುಭವಿಗಳು ಮತ್ತು ಅವರ ಅವಲಂಬಿತರು ಯಾವುದೇ ಸಹಾಯ ಧನದ ಅರ್ಜಿ ಸಲ್ಲಿಸಿದ 3 ತಿಂಗಳೊಳಗೆ ಸಹಾಯ ಧನದ ಹಣವನ್ನು ಮಂಜೂರು ಮಾಡಬೇಕು. ಹೆರಿಗೆಯಾದ ಮಹಿಳೆಯರಿಗೆ ಎರಡು ಮಕ್ಕಳಿಗೆ ತಲಾ ಒಬ್ಬರಿಗೆ 50 ಸಾವಿರ ರೂ. ಸಹಾಯಧನ , ಹೆರಿಗೆ ಭತ್ಯೆ ಸಹಾಯಧನ ನೀಡಬೇಕು ಹಾಗೂ ಕನಿಷ್ಟ 6 ತಿಂಗಳು ಬಾಣಂತನದ ಹಾರೈಕೆ ಮಾಡಿಕೊಳ್ಳಲು ತಿಂಗಳಿಗೆ 10,000 ರೂ.ಗಳಂತೆ 60 ಸಾವಿರ ರೂ.ಗಳ ಸಹಾಯಧನ ನೀಡಬೇಕು. ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರದಲ್ಲಿ ಮರಳು ಮತ್ತು ಎಂ. ಸ್ಯಾಂಡ್ ಹಾಗೂ ಕಬ್ಬಿಣದ ಡಿಪೋಗಳನ್ನು ಸರ್ಕಾರದ ಅಧೀನದಲ್ಲಿ ಮಾಡಬೇಕೆಂದರು.

ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ವಿ. ಲಕ್ಷ್ಮಣ, ಭೀಮಾರೆಡ್ಡಿ, ಮುರುಗೇಶ್, ಜಿ.ಆರ್. ನಾಗರಾಜ, ಯರಗುಂಟೆ ಸುರೇಶ್, ಮಹಮದ್ ರಫೀಕ್, ಎಸ್.ಎಂ. ಸಿದ್ದಲಿಂಗಪ್ಪ, ಆವರಗೆರೆ ಸಿದ್ದಲಿಂಗಪ್ಪ, ಶಿವಕುಮಾರ್ ಡಿ. ಶೆಟ್ಟರ್, ಡಿ. ಷಣ್ಮುಗಂ, ಬಿ. ದುಗ್ಗಪ್ಪ, ನಾಗಮ್ಮ, ನೇತ್ರಾವತಿ, ದಾದಾಪೀರ್, ಸುರೇಶ್ ಸೇರಿದಂತೆ ಹಲವಾರು ಕಾರ್ಮಿಕರು ಪಾಲ್ಗೊಂಡಿದ್ದರು.

## ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಮಹಿಳಾ ದಿನಾಚರಣೆ

# ಪ್ರೀತಿ, ವಿಶ್ವಾಸದ ವಾತಾವರಣ ನಿರ್ಮಿಸಿ

**ಕಮಲಾ ಹಂಪನಾ**




ದಾವಣಗೆರೆ, ಮಾ. 9- ಸಮಾಜದಲ್ಲಿ ಪ್ರತಿ ಮಹಿಳೆಗೂ ಬದುಕುವ ಸ್ವಾತಂತ್ರ್ಯ, ಸ್ವಾಭಿಮಾನ ಇದೆ. ದೌರ್ಜನ್ಯ, ಶೋಷಣೆ ಬಿಟ್ಟು ಪ್ರೀತಿ, ವಿಶ್ವಾಸದಿಂದ ಗೌರವಯುತವಾಗಿ ಬಾಳುವ ವಾತಾವರಣ ನಿರ್ಮಿಸುವುದು ಎಲ್ಲರ ಜವಾಬ್ದಾರಿ ಎಂದು ಹಿರಿಯ ಸಾಹಿತಿ ಡಾ. ಕಮಲಾ ಹಂಪನಾ ಸಲಹೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾನಿಲಯ ಐಕ್ಯೂಎಸಿ ಮತ್ತು ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಸೋಮವಾರ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜೀವನದ ಪಯಣದಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಇದೊಂದು ಬಂಡಿ ಇದ್ದಂತೆ ಸ್ವಲ್ಪ ವ್ಯತ್ಯಾಸವಾದರೂ ಸಂಚಾರಕ್ಕೆ ಅಡ್ಡಿಯಾಗುತ್ತದೆ.

ಹಾಗಾಗಿ ಸಮಾನತೆ, ಪರಸ್ಪರ ವಿಶ್ವಾಸ, ಆತ್ಮೀಯ ಸಂಬಂಧದೊಂದಿಗೆ ಬದುಕುವುದು ಮುಖ್ಯ ಎಂದು ಸಲಹೆ ನೀಡಿದರು.

ಕೊರೊನಾ ವಾರಿಯರ್ ಜೆಜೆಎಂ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕಿ ಡಾ. ಎ.ಎಂ. ಶಿಲ್ಪಶ್ರೀ, ಆರೋಗ್ಯ ಸಹಾಯಕಿ ರತ್ನಮ್ಮ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಕಮಲಾ ಹಂಪನಾ, ಕೊರೊನಾ ವಾರಿಯರ್ಸ್ ಡಾ. ಶಿಲ್ಪಶ್ರೀ, ದಾದಿ ರತ್ನಮ್ಮ ಅವರನ್ನು ವಿಶ್ವವಿದ್ಯಾನಿಲಯದ ವತಿಯಿಂದ ಸನ್ಮಾನಿಸಲಾಯಿತು.

ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ, ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್, ಪರೀಕ್ಷಾಂಗ ಕುಲಸಚಿವೆ ಪ್ರೊ. ಎಚ್.ಎಸ್. ಅನಿತಾ ಮಾತನಾಡಿದರು. ಹಣಕಾಸು ಅಧಿಕಾರಿ ಡಿ. ಪ್ರಿಯಾಂಕ ಉಪಸ್ಥಿತರಿದ್ದರು. ಡಾ. ನಾಗಸ್ವರೂಪ, ಡಾ. ಎಚ್.ವಿ.ಶಾಂತರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಟಿ.ಎಲ್. ಪ್ರವೀಣ್ ವಂದಿಸಿದರು. ಡಾ.ಭೀಮಾಶಂಕರ ಜೋಶಿ ನಿರೂಪಿಸಿದರು.

# ಸುಲ್ತಾನ್ ಡೈಮಂಡ್ ಅಂಡ್ ಗೋಲ್ಡ್‌ನಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ.9- ಇಲ್ಲಿನ ಪಿ.ಬಿ. ರಸ್ತೆಯಲ್ಲಿರುವ ಸುಲ್ತಾನ್ ಡೈಮಂಡ್ಸ್ ಅಂಡ್ ಗೋಲ್ಡ್ ನಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಸಮಾಜ ಸೇವೆಯಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿರುವ ಮಹಿಳೆಯರಿಗೆ 'ನಾರಿ ಶಕ್ತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಲೇಬೆನ್ನೂರಿನ ನಾಹಿದಾ ಅಂಜುಂ, ಜೆಜೆಎಂ ಮೆಡಿಕಲ್ ಕಾಲೇಜಿನ ಡಾ. ಅನಿತಾ ರವಿ, ಬಾಪೂಜಿ ಆಸ್ಪತ್ರೆಯ ಡಾ. ಸುನೀತಾ ರವೀಂದ್ರ, ಹರಿಹರ ಶ್ರೇಯ ಆಸ್ಪತ್ರೆಯ ಡಾ. ರಶ್ಮಿ, ಸೇಂಟ್ ಪೀಟರ್ ಕಾನ್ವೆಂಟ್ ನ ವಾಣಿ ಕೇಶವ್, ಅಂಜುಮನ್ ಇಸ್ಲಾಮಿಯಾ ಶಾಲೆಯ ಜುಬೇದಾ ಬಾನು ಅವರುಗಳಿಗೆ 'ನಾರಿ ಶಕ್ತಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸುಲ್ತಾನ್ ಡೈಮಂಡ್ಸ್ ಅಂಡ್ ಗೋಲ್ಡ್ ನ ವ್ಯವಸ್ಥಾಪಕ ಬಿಜು ಮ್ಯಾಥ್ಯೂ ಪ್ರಶಸ್ತಿ ಪ್ರದಾನ ಮಾಡಿದರು.

ಸುಲ್ತಾನ್ ಶಾಪಿಂಗ್ ಫೆಸ್ಟ್ ಲಕ್ಕಿ ಡ್ರಾ ವಿಜೇತ ಅಖಿಲ್ ಅಹಮದ್ ಕೆರೆಬಿಳಚಿ ಅವರಿಗೆ ಸ್ಕೂಟಿ ವಾಹನವನ್ನು ಮಲೇಬೆನ್ನೂರಿನ ಪುರಸಭೆಯ ನಾಹಿದಾ ಅಂಜುಂ ಹಸ್ತಾಂತರಿಸಿದರು.

ಮಾರುಕಟ್ಟೆ ವ್ಯವಸ್ಥಾಪಕ ಜೆ.ಎಂ. ಪ್ರಸಾದ್, ಆರ್.ಹೆಚ್. ಚೇತನ್, ಅಬ್ರಾರ್ ಅಹ್ಮದ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕೊರೊನಾ ನಿಯಮ ಪಾಲಿಸಿ ಹಬ್ಬ, ಉರುಸು ಆಚರಿಸಿ : ವೀರಬಸಪ್ಪ



ಮಲೇಬೆನ್ನೂರು, ಮಾ.9- ಹಬ್ಬ, ಜಾತ್ರೆ, ಉರುಸುಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಡಿ. ಕೊರೊನಾ ಬಗ್ಗೆ ನಿರ್ಲಕ್ಷ್ಯ ಬೇಡ, ಕೊರೊನಾ ಕಡಿಮೆ ಆಗಿದ್ದರೂ ಜಾಗೃತರಾಗಿರಿ ಎಂದು ಪಿಎಸ್ಐ ವೀರಬಸಪ್ಪ ಕುಸಲಾಪುರ ಹೇಳಿದರು.

ಅವರು ಮಂಗಳವಾರ ಸಂಜೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮಹಾಶಿವರಾತ್ರಿ ಹಾಗೂ ಮುಸ್ಲಿಂ ಬಾಂಧವರ ಷಬ್ ಎ-ಬರಾತ್ ಹಬ್ಬಗಳ ಅಂಗವಾಗಿ ಕರೆದಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಎರಡು ಹಬ್ಬಗಳು ಒಂದೇ ದಿನ ಬಂದಿರುವುದರಿಂದ ಎಲ್ಲರೂ ಶಾಂತಿ, ಸುರಕ್ಷತೆ, ಸಾಮರಸ್ಯ ಕಾಪಾಡಬೇಕು. ಶಿವರಾತ್ರಿ ಜಾಗರಣೆ ಇರುವ ಪ್ರಯುಕ್ತ ರಾತ್ರಿ ಮಸೀದಿಗಳಲ್ಲಿ ನಡೆಸುವ ಪ್ರಾರ್ಥನೆ ಮತ್ತು ಧಾರ್ಮಿಕ ಪ್ರವಚನ ಕಾರ್ಯಕ್ರಮವನ್ನು ಒಂದೇ ಸಮಯಕ್ಕೆ ಮುಕ್ತಾಯ ಮಾಡಬೇಕೆಂದು ವೀರಬಸಪ್ಪ ತಿಳಿಸಿದರು.


ಕೋವಿಡ್-19 ಹಿನ್ನೆಲೆಯಲ್ಲಿ ನಿಯಮಗಳನ್ನು ಪಾಲನೆ ಮಾಡಬೇಕು, 60 ವರ್ಷ ಮೇಲ್ಪಟ್ಟವರನ್ನು ಮತ್ತು 10 ವರ್ಷದೊಳಗಿನ ಮಕ್ಕಳನ್ನು ಅನವಶ್ಯಕವಾಗಿ ಕರೆದುಕೊಂಡು ತಿರುಗಾಡಬೇಡಿ. ಹೆಚ್ಚು ಜನ ಒಂದೇ ಕಡೆ ಸೇರಬೇಡಿ ಎಂದು ವೀರಬಸಪ್ಪ ಮಾನವಿ ಮಾಡಿದರು.

ಪಟ್ಟಣದಲ್ಲಿ ಜಾತ್ರೆ, ಉರುಸು ಇರುವುದರಿಂದ ಒಂದೆರಡು ದಿನಗಳಲ್ಲಿ ಸಿಸಿ ಟಿವಿ ಕ್ಯಾಮರಾಗಳನ್ನು ರಿಪೇರಿ ಮಾಡಿಸಿಕೊಡುವಂತೆ ಪಿಎಸ್ಐ ವೀರಬಸಪ್ಪ ಅವರು ಕೇಳಿದಾಗ, ಸದಸ್ಯರಾದ ಯೂಸೂಫ್, ದಾದಾವಲಿ, ಎ.ಕೆ. ಲೋಕೇಶ್ ಮತ್ತು ಕೆ.ಜಿ. ಲೋಕೇಶ್ ಅವರು ಸಮ್ಮತಿ ಸೂಚಿಸಿದರು.

ಮುಸ್ಲಿಂ ಸಮಾಜದ ಯುವ ಮುಖಂಡ ನಯಾಜ್, ಕೆ.ಜಿ. ಕೊಟ್ರೇಶಪ್ಪ, ಕೆ.ಜಿ. ಪರಮೇಶ್ವರಪ್ಪ, ಪಾನಿಪುರಿ ರಂಗನಾಥ್, ಸಿರಿಗೆರೆ ಕುಮಾರ್, ಬೆಣ್ಣೆಹಳ್ಳಿ ಸಿದ್ದೇಶ್, ಶೃತಿ ಶಾಮಿಯಾನ ಯೂಸೂಫ್ ಅಲಿ ಸೇರಿದಂತೆ, ವಿವಿಧ ಮಸೀದಿಗಳ ಮುತುವಲ್ಲಿಗಳು ಶಾಂತಿ ಸಭೆಯಲ್ಲಿ ಹಾಜರಿದ್ದರು.

ಎಎಸ್ಐ ಬಸವರಾಜಪ್ಪ ಸ್ವಾಗತಿಸಿದರು. ಶಶಿಕುಮಾರ್ ವಂದಿಸಿದರು.

## ಈ ಸಂಬಂಧಗಳೇ ಹೀಗೆ....!?



ಎಲ್ಲಿಯೂ ನಿಲ್ಲದ ಯಾರ ಮಾತೂ
ಕೇಳದ ಓಡುವ ಮೋಡಗಳು....
ಕಾಣದ ಕಂಬನಿಯ ಹಾಡುಗಳು!

ಹುಲಿ ಸಿಂಹ ಚಿರತೆಗಳ ದಾಳಿ
ದಾಪುಗಾಲಿಕ್ಕುತ
ಸಾವು ಬೆನ್ನಿಗಿದ್ದರೂ ಆಡುತ ಅಂಕೆ-
ಶಂಕೆಯಿಲ್ಲದೇ
ಚಿನ್ನಾಟದಿ ಮೈ ಮರೆವ ಜಿಂಕೆಗಳು...

ಪ್ರೀತಿಯೋ ಸ್ನೇಹವೋ ಪ್ರೇಮವೋ
ಕಾಮವೋ ಉದಯ ರವಿಯ ಕಿರಣದ
ಸ್ಪರ್ಶಕೆ ಅರಳುತ ನಕ್ಕು ನಲಿದು
ಸಂಜೆಗೆ ಬಾಡುವ ಹೂವುಗಳು.....

ಕಾಲದ ಚಿಮ್ಮುಹಲಗೆಯಲಿ ಬೆಂದು
ನೊಂದು ಮೋಸಕ್ಕೆಡೆಯಾಗಿ
ದಾಸ್ಯಕ್ಕಡಿಯಾಗಿ ಅಪಹಾಸ್ಯದ ಲಾಸ್ಯದಿ
ಸುರುಳಿ ಸಿಂಬೆಯಾಗಿ ಕೆರಳುವ
ಹಾವುಗಳು..
ಮಾನಸ ಬಯಲಲಿ ಬೆಳೆದು ನಿಂತ
ಹೊಲ-ಗದ್ದೆಗಳನಾಯ್ದು ಮೇಯುತ
ನಾಡಿನ ನಿದ್ದೆಗೆಡಿಸಿ ಕಾಡಿಗೆ ಮರಳುವ
ಅಂಕುಶವಿರದ ಆನೆಯ ಹಿಂಡುಗಳು.....

ಅಪಾಯದ ಅರಿವಿಲ್ಲದೇ ಮೇವಿನ
ಗಮನಕೆ, ಕಾವಿನಾಸೆಗೆ ಚದುರಿ
ಚಿಲ್ಲರೆಯಾದ ಮನದ ಜಾಡು;
ಸುಡುಗಾಡು - ಸುತ್ತಿ ಬಳಲಿ ಬೆಂಡಾದ
ಗುಂಪನಗಲಿದ ಗೋವುಗಳು.

ಊರೆಲ್ಲಾ ಉಂಡು ಮಲಗಿದ
ಮೇಲಿಂತಿರುಗುವ ಮೌನದ
ಠಾವುಗಳು.....
ಈ....ಸಂಬಂಧಗಳೇ ಹೀಗೆ...!?

**- ಮಹಾಂತೇಶ್.ಬಿ. ನಿಟ್ಟೂರ್**
mahanteshbnittur@gmail.com

# ಮೇ 14 ರಿಂದ ವೀರಭದ್ರೇಶ್ವರ, ಗಣಪತಿ, ಭದ್ರಕಾಳಿ ದೇವಸ್ಥಾನ ಲೋಕಾರ್ಪಣೆ



ಮಲೇಬೆನ್ನೂರು, ಮಾ.9- ಪಟ್ಟಣದ ಹೊರವಲಯದಲ್ಲಿ (ಕುಂಬಳೂರು ರಸ್ತೆಯಲ್ಲಿ) ನೂತನವಾಗಿ ನಿರ್ಮಿಸಿರುವ ಶ್ರೀ ವೀರಭದ್ರೇಶ್ವರ, ಶ್ರೀ ಮಹಾಗಣಪತಿ, ಶ್ರೀ ಭದ್ರಕಾಳಿ ದೇವಸ್ಥಾನಗಳ ಸಮುಚ್ಚಯವನ್ನು ಮೇ 14, 15 ಹಾಗೂ 16 ರಂದು ಲೋಕಾರ್ಪಣೆ ಮಾಡಲಾಗುವುದು ಎಂದು ದೇವಸ್ಥಾನ ಸಮಿತಿ ಸದಸ್ಯರು, ಜಿಲ್ಲಾ ಜೆಡಿಎಸ್ ಅಧ್ಯಕ್ಷರೂ ಆದ ಬಿ. ಚಿದಾನಂದಪ್ಪ ತಿಳಿಸಿದ್ದಾರೆ.

ನೂತನ ದೇವಸ್ಥಾನಗಳ ಲೋಕಾರ್ಪಣೆ ಸಮಾರಂಭ ಕುರಿತು ಚರ್ಚಿಸಲು ಕರೆಯಲಾಗಿದ್ದ ಸಭೆಯಲ್ಲಿ ಅಂತಿಮವಾಗಿ ಕಾರ್ಯಕ್ರಮಗಳ ವಿವರವನ್ನು ಅವರು ಪ್ರಕಟಿಸಿದರು.

ಮೇ 14 ರಂದು ಬೆಳಿಗ್ಗೆ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ಗೋಪುರಕ್ಕೆ ಕಳಸಾರೋಹಣ ನೆರವೇರಲಿದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮೇ 15ರಂದು ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಧಾರ್ಮಿಕ ಸಮಾರಂಭ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿ ಯಡ್ಯೂರಪ್ಪ ಸೇರಿದಂತೆ ಸಚಿವರು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಇವೆ.

ಮೇ 16 ರಂದು ಬೆಳಿಗ್ಗೆ ಸರ್ವಧರ್ಮ ಸಾಮೂಹಿಕ ವಿವಾಹಗಳನ್ನು ಹಮ್ಮಿಕೊಂಡಿದ್ದು, ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಚಿದಾನಂದಪ್ಪ ತಿಳಿಸಿದರು. ಮೂರು ದಿನಗಳ ಕಾರ್ಯಕ್ರಮದಲ್ಲಿ ಬೆಳಿಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ದಾಸೋಹ ವ್ಯವಸ್ಥೆ ಮಾಡಲಾಗುವುದು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ದೇವಸ್ಥಾನ ಸಮಿತಿ ಅಧ್ಯಕ್ಷ ಬಿ. ಪಂಚಪ್ಪ ಈ ದೇವಸ್ಥಾನಗಳು ಎಲ್ಲಾ ಜನರ ಪುಣ್ಯಕ್ಷೇತ್ರವಾಗಲಿ ಎಂಬುದು ನಮ್ಮ ಆಶಯ ಎಂದರು. ಸಭೆಯಲ್ಲಿ ಹಲವರು ತನು-ಮನ-ಧನ ಸಹಾಯದ ವಾಗ್ದಾನ ಮಾಡಿದರು. ಪುರಸಭೆ ಪ್ರಭಾರ ಅಧ್ಯಕ್ಷೆ ಅಂಜಿನಮ್ಮ, ಕುಂಬಳೂರು ಗ್ರಾ.ಪಂ. ಅಧ್ಯಕ್ಷೆ ಲೀಲಾ ಶಿವಕುಮಾರ್, ಸೇರಿದಂತೆ ಗ್ರಾ.ಪಂ. ಸರ್ವ ಸದಸ್ಯರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಪೂಜಾರ್ ಬಸಪ್ಪ, ಜಿ. ಮಂಜುನಾಥ್ ಪಟೇಲ್, ಮಾಗಾನಹಳ್ಳಿ ಹಾಲಪ್ಪ, ಯಕ್ಕನಹಳ್ಳಿ ಬಸವರಾಜಪ್ಪ, ಬಿ. ವೀರಯ್ಯ, ನಿಟ್ಟೂರು ಸಂಜೀವ ಮೂರ್ತಿ, ಮಹಾಂತೇಶ್ ಸ್ವಾಮಿ, ಮಹಾಲಿಂಗಪ್ಪ, ಮಾಸಣಗಿ ಶೇಖರಪ್ಪ, ಎಂ. ಆರ್. ಮಹಾದೇವಪ್ಪ, ಹಳೇಮನಿ ಶಂಭುಲಿಂಗಪ್ಪ, ಪಾಳೇಗಾರ್ ನಾಗರಾಜ್, ಕೆ. ಜಿ. ಮಂಜುನಾಥ್, ಭರಮಹಳ್ಳಿ ಭರಮಗೌಡ, ತಳಸದ ಬಸವರಾಜ್, ಕೆ.ಪಿ. ಗಂಗಾಧರ್, ಭೋವಿ ಕುಮಾರ್, ಶ್ರೀಪಾದ ಶ್ರೇಷ್ಠಿ, ರಾಮರೆಡ್ಡಿ, ಚಿಟ್ಟಕ್ಕಿ ನಾಗರಾಜ್, ಪೂಜಾರ್ ಹಾಲೇಶಪ್ಪ, ಚಿಕ್ಕಪ್ಪ ಮೇಷ್ಟ್ರು, ಕುಂಬಳೂರು ಆನಂದಪ್ಪ, ಜೆ. ನಾಗಭೂಷಣ್, ಹೊಸಳ್ಳಿ ಕರಿಬಸಪ್ಪ, ದೇವಸ್ಥಾನ ಸಮಿತಿಯ ಬಿ. ನಾಗೇಂದ್ರಪ್ಪ, ಬಿ. ಉಮಾಶಂಕರ್, ಬಿ. ಮಲ್ಲಿಕಾರ್ಜುನ್, ಬಿ. ನಾಗೇಶ್, ಬಿ.ವಿ. ರುದ್ರೇಶ್ ಸೇರಿದಂತೆ ಹಲವು ಗಣ್ಯರು ಸಭೆಯಲ್ಲಿ ಭಾಗವಹಿಸಿದ್ದರು. ಉಪನ್ಯಾಸಕ ಹೊನ್ನಾಳಿ ಗಂಗಾಧರ್ ಸ್ವಾಗತಿಸಿ, ವಂದಿಸಿದರು.

# ವಕೀಲರ ಸಂರಕ್ಷಣಾ ಕಾಯಿದೆ ಜಾರಿಗೆ ಆಗ್ರಹ: ಸತ್ಯಾಗ್ರಹ



ದಾವಣಗೆರೆ, ಮಾ.9- ವಕೀಲರ ಸಂರಕ್ಷಣಾ ಕಾಯಿದೆ ಜಾರಿಗೆ ತರುವಂತೆ ಒತ್ತಾಯಿಸಿ ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ವಕೀಲರು ಕಾರ್ಯ ಕಲಾಪಗಳನ್ನು ನಡೆಸುತ್ತಾ ಇಂದಿನಿಂದ ಮೂರು ದಿನಗಳ ಕಾಲ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಧರಣಿಯಲ್ಲಿ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್, ಉಪಾಧ್ಯಕ್ಷ ಬಿ.ಬಿ. ರಾಮಪ್ಪ, ಕಾರ್ಯದರ್ಶಿ ಎಲ್.ಹೆಚ್. ಪ್ರದೀಪ್, ಸಹ ಕಾರ್ಯದರ್ಶಿ ಜಿ.ಕೆ. ಬಸವರಾಜ್, ನಿಕಟ ಪೂರ್ವ ಅಧ್ಯಕ್ಷ ಎನ್.ಟಿ. ಮಂಜುನಾಥ, ನಿಕಟ ಪೂರ್ವ ಉಪಾಧ್ಯಕ್ಷ ಹೆಚ್. ದಿವಾಕರ್, ವಕೀಲರಾದ ಎ.ಸಿ. ರಾಘವೇಂದ್ರ, ಪಿ.ವಿ. ಶಿವಕುಮಾರ್, ಕಂದಗಲ್ ಮಲ್ಲಿಕಾರ್ಜುನಪ್ಪ, ಮಂಜುಳ, ಭಾಗ್ಯಮ್ಮ ಸೇರಿದಂತೆ ಇತರೆ ವಕೀಲರು ಭಾಗವಹಿಸಿದ್ದಾರೆ.

# ಬಿಲ್ ಪಾವತಿ ವಂಚನೆ: ಬೆಸ್ಕಾಂ ಜಾಗೃತಿ

ದಾವಣಗೆರೆ, ಮಾ.9- ನಗರದಲ್ಲಿ ಬೆಸ್ಕಾಂ ಸಿಬ್ಬಂದಿ ಎಂದು ಹೇಳಿಕೊಂಡು ವಿದ್ಯುತ್ ಬಿಲ್ ಪಾವತಿಸುವುದಾಗಿ ಹಣ ಪಡೆದು, ಪಾವತಿಸದೇ ವಂಚನೆ ಮಾಡಿರುವ ಪ್ರಕರಣಗಳು ತಡವಾಗಿ ಬೆಳಕಿಗೆ ಬಂದಿವೆ.

ವಿದ್ಯುತ್ ಬಿಲ್ ಅನ್ನು ಬೆಸ್ಕಾಂ ಅಧಿಕೃತ ಕೌಂಟರ್‌ಗಳಲ್ಲಿಯೇ ಪಾವತಿಸಬೇಕು. ಬೆಸ್ಕಾಂ ನಿಂದ ಕೆಲಸ ನಿರ್ವಹಣೆಗಾಗಿ ಸಿಬ್ಬಂದಿ ತಮ್ಮ ಬಳಿ ಬಂದಾಗ ಗುರುತಿನ ಚೀಟಿಯನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು. ಬಿಲ್ಲನ್ನು ಆನ್‌ಲೈನ್‌ನಲ್ಲಿ ಪಾವತಿಸುವುದರ ಮೂಲಕ ಇಂತಹ ವಂಚನೆಗಳನ್ನು ತಪ್ಪಿಸಬಹುದು ಹಾಗೂ ಬೆಸ್ಕಾಂ ಮಿತ್ರ ಆ್ಯಪ್ ಮುಖಾಂತರ ವಿದ್ಯುತ್ ಬಿಲ್ ಪಾವತಿಸುವುದು ಕ್ಷೇಮಕರ ಎಂದು ಬೆಸ್ಕಾಂ ಜಾಗೃತಿ ಮೂಡಿಸಿದೆ.

ಯಾರಾದರೂ ಅನುಮಾನಾಸ್ಪದವಾಗಿ ವರ್ತಿಸಿದಲ್ಲಿ ಕೂಡಲೇ ಬೆವಿಕಂ ಗ್ರಾಹಕರ ಸೇವಾ ಕೇಂದ್ರ ಸಂಖ್ಯೆ: 08192-250210 ಹಾಗೂ ಮೊ: 9483549210 ಸಂಪರ್ಕಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

# ಸಿದ್ಧಗಂಗಾ ಶಾಲೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 9- ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಲೇಡಿ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ಫ್ಲಾಕ್ ಲೀಡರ್ಸ್ ಹಾಗೂ ಗೈಡ್ ಕ್ಯಾಪ್ಟನ್‌ಗಳೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಟೋಟ ಸ್ಪರ್ಧೆಗಳ ಮೂಲಕ ಆಚರಿಸಲಾಯಿತು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಜಸ್ಟಿನ್ ಡಿಸೌಜ, ಖಜಾಂಚಿಗಳಾದ ಶ್ರೀಮತಿ ರೇಖಾರಾಣಿ ಕೆ. ಎಸ್ ಹಾಗೂ ಶ್ರೀಮತಿ ಗಾಯತ್ರಿ ಚಿಮ್ಮಡ್ ರವರು ಹಾಜರಿದ್ದರು. ಕಾರ್ಯದರ್ಶಿ ಶ್ರೀಮತಿ ಶಶಿಕಲಾ ಉಸ್ತುವಾರಿ ನೋಡಿಕೊಂಡರು.

# ವಾರ್ತಾ ಇಲಾಖೆಯಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ ಮಾ.9 - ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಅಶೋಕಕುಮಾರ್.ಡಿ, ಸಹಾಯಕ ನಿರ್ದೇಶಕ ತುಕಾರಾಂ ರಾವ್.ಬಿ.ವಿ, ವಾರ್ತಾ ಸಹಾಯಕಿ ಭಾಗ್ಯ ಎಂ.ಟಿ, ಸಿಬ್ಬಂದಿಗಳಾದ ಚನ್ನಕೇಶವ ಎನ್, ಶೈಲ.ಎ.ಸಿ, ಅಪ್ರೆಂಟಿಸ್‌ಗಳಾದ ಗೌರಮ್ಮ, ಪ್ರೀತಿ, ಮಾಲತಿ, ಶಿವಕುಮಾರ್ ಇದ್ದರು.

# ಮಾರುತಿ ಮೋಟಾರ್ಸ್‌ ಮಹಿಳಾ ದಿನಾಚರಣೆ



ದಾವಣಗೆರೆ, ಮಾ.9 - ಮಾರುತಿ ಮೋಟಾರ್ಸ್ ದಾವಣಗೆರೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹೀಂದ್ರ ಕಂಪನಿಯ ಅಧಿಕಾರಿಗಳು ಹಾಗೂ ಮಾರುತಿ ಮೋಟಾರ್ಸ್‌ನ ಮಾಲೀಕರಾದ ಪ್ರಕಾಶ್.ಪಿ.ಹೆಚ್., ಶ್ರೀಮತಿ ನಾಗರತ್ನಮ್ಮ ಹಾಗೂ ಮಹಿಳಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶಾರದಾಂಬ ಮಹಿಳಾ ಸಂಘದಿಂದ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 9- ಶ್ರೀ ಶಾರದಾಂಬ ಮಹಿಳಾ ಸಂಘದಿಂದ ನಗರದ ಮೌನೇಶ್ವರ ಶಾಲೆಯ ವಿಶೇಷ ಮಕ್ಕಳೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಮಕ್ಕಳಿಗೆ ಸಿಹಿ ಹಂಚಿ, ದಿನಸಿ ಸಾಮಗ್ರಿಗಳನ್ನು ವಿತರಿಸಲಾಯಿತು. ಪ್ರೇಮ ಬಾಲರಾಜ್, ಸೌಮ್ಯ ಸತೀಶ್, ಮಧುಮತಿ ಗಿರೀಶ್, ನಾಗಶ್ರೀ ಗಿರೀಶ್, ಮೊನಿಷಾ ಹಾಗೂ ಶಾಲೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಕೂಡ್ಲಿಗಿ: ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳೆಯರಿಗೆ ಕ್ಯಾನ್ಸರ್ ತಪಾಸಣೆ



ಕೂಡ್ಲಿಗಿ, ಮಾ.9- ಮಹಿಳಾ ದಿನಾಚರಣೆ ಅಂಗವಾಗಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಗರ್ಭಚೀಲ ಕ್ಯಾನ್ಸರ್ ಪತ್ತೆ, ಸ್ತನ ಕ್ಯಾನ್ಸರ್ ಪತ್ತೆ ಹಾಗೂ ಗರ್ಭಿಣಿಯರ ತಪಾಸಣೆ ಕಾರ್ಯಕ್ರಮದ ಉದ್ಘಾಟನೆಯನ್ನು ಪಟ್ಟಣ ಪಂಚಾಯ್ತಿ ಸದಸ್ಯೆ ರೇಣುಕಾ ಎಸ್. ದುರುಗೇಶ್ ನೆರವೇರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ವಿನಯ್ ಮುದೇಗೌಡ್ರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ಶಾರದಾ ಬಾಯಿ, ವೈದ್ಯಾಧಿಕಾರಿ ಡಾ. ನಾಗರಾಜ್, ಸ್ತ್ರೀ ರೋಗ ತಜ್ಞೆ ಡಾ. ರೇಖಾ, ಶಸ್ತ್ರ ಚಿಕಿತ್ಸಕರಾದ ಡಾ. ಹೆಚ್.ಎಸ್. ಗುರುನಾಥ್ ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯ್ತಿ ಸದಸ್ಯರಾದ ಕಾಲ್ಚಟಿ ಈಶಣ್ಣ, ಪಟ್ಟಣ ಪಂಚಾಯ್ತಿ ಮಾಜಿ ಸದಸ್ಯ ಹಾಗೂ ದಲಿತ ಸಂಘಟನೆಯ ಜಿಲ್ಲಾ ಸಂಚಾಲಕ ಎಸ್. ದುರುಗೇಶ್, ದಂತ ವೈದ್ಯೆ ಡಾ. ನಂದಿನಿ , ಮಕ್ಕಳ ತಜ್ಞೆ ಡಾ. ಐಶ್ವರ್ಯ, ಆಸ್ಪತ್ರೆ ಸಿಬ್ಬಂದಿಗಳಾದ ಸುನೀಲ್ ಕುಮಾರ್ ಸಾತಿಹಾಳ್, ಅಂಗಡಿ ಮಹಾಂತೇಶ, ಸೋಮಶೇಖರ್, ಈಶಪ್ಪ, ಗಂಗಮ್ಮ, ವೇದಾವತಿ, ಗುರು ಬಸವರಾಜ, ಶುಶ್ರೂಷಾಧಿಕಾರಿಗಳು ಹಾಗೂ ಸಹಾಯಕ ಆಡಳಿತಾಧಿಕಾರಿ ಈರಣ್ಣ, ಕಛೇರಿ ಅಧೀಕ್ಷಕ ಕೆ.ಬಿ.ಎಂ. ವೀರಭದ್ರಯ್ಯ, ತಾಲ್ಲೂಕು ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಆಪ್ತ ಸಮಾಲೋಚಕರಾದ ನಾಗರತ್ನ ಸ್ವಾಗತಿಸಿದರು. ಓಬಣ್ಣ ವಂದಿಸಿದರು. ಕೆ. ಪ್ರಶಾಂತ ಕುಮಾರ್ ನಿರೂಪಿಸಿದರು. ವೇದಿಕೆ ಕಾರ್ಯಕ್ರಮದ ನಂತರ 160ಕ್ಕೂ ಹೆಚ್ಚು ಮಹಿಳೆಯರು ತಪಾಸಣೆ ಮಾಡಿಸಿಕೊಂಡರು.

## ಇಂದು ಕಾಡಾ ಅಧ್ಯಕ್ಷರ ಭೇಟಿ



ಭದ್ರಾ ಅಚ್ಚುಕಟ್ಟಿನ ಕೊನೆ ಭಾಗಗಳಾದ ಹೊಳೆಸಿರಿಗೆರೆ, ಕಮಲಾಪುರ, ಭಾನುವಳ್ಳಿ, ಕೆ.ಎನ್. ಹಳ್ಳಿ ಇನ್ನಿತರೆ ಗ್ರಾಮಗಳಿಗೆ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಅವರು ಇಂದು ಬೆಳಿಗ್ಗೆ 10.30 ಕ್ಕೆ ಭೇಟಿ ನೀಡಿ, ನೀರು ನಿರ್ವಹಣೆಯನ್ನು ಪರಿಶೀಲಿಸಲಿದ್ದಾರೆ.

## ವಾರ್ಷಿಕೋತ್ಸವ

ದಾವಣಗೆರೆ, ಮಾ.9- ಇಲ್ಲಿನ ಮಹಾರಾಜಪೇಟೆಯಲ್ಲಿರುವ ಶ್ರೀ ವಿಠಲ ಮಂದಿರದಲ್ಲಿ ಶ್ರೀ ವಿಠಲ ರುಕ್ಮಾಯಿ ಶಿಲಾಮೂರ್ತಿಗಳ ಹಾಗೂ ಮಹಾಶಿವರಾತ್ರಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಾ.11 ರಂದು ಸಂಜೆ 5ಕ್ಕೆ ಕಲಾವತಿ ಮಹಿಳಾ ಮಂಡಳಿಯಿಂದ ಭಜನೆ, ಸಂಜೆ 6 ರಿಂದ 7 ರವರೆಗೆ ಹರಿಪಾಠ ಭಜನೆ, ರಾತ್ರಿ 10 ರಿಂದ ಹರಿಕೀರ್ತನೆ ಗುರುವರ್ಯ ಯಶವಂತ ಪ್ರಭಾಕರ್ (ದಾದಾ) ಇವರಿಂದ, ರಾತ್ರಿ 12 ರಿಂದ ಹರಿಕೀರ್ತನೆ ಮತ್ತು ಪಾವುಲ್ ಭಜನಾ ಕಾರ್ಯಕ್ರಮ ನಡೆಯಲಿದೆ.


ಮಾ.12 ರಂದು ಬೆಳಿಗ್ಗೆ 9 ಕ್ಕೆ ಭಜನೆಯೊಂದಿಗೆ ಕುಂಭಾಭಿಷೇಕ, ಶ್ರೀ ವಿಠಲ ರುಕ್ಮಾಯಿ ದೇವರ ರಥೋತ್ಸವ ಜರುಗಲಿದೆ. ಚೌಕಿಪೇಟೆ, ದೊಡ್ಡಪೇಟೆ, ಎಸ್‌ಕೆಪಿ ರಸ್ತೆ, ದುರ್ಗಾಂಬಿಕ ಸರ್ಕಲ್, ಹಗೇದಿಬ್ಬ ಸರ್ಕಲ್ ಮೂಲಕ ವಿಠಲ ಮಂದಿರ ಸೇರಲಿದೆ.

## ಮಂಜುನಾಥ್ ನೇಮಕ



ದಾವಣಗೆರೆ, ಮಾ.9- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಇ. ಮಂಜುನಾಥ್ ಅವರು ನೇಮಕಗೊಂಡಿರುವುದಾಗಿ ಜಿಲ್ಲಾಧ್ಯಕ್ಷ ಹೆಚ್. ಸುಭಾನ್‌ಸಾಬ್ ತಿಳಿಸಿದ್ದಾರೆ.

# ಮೈತ್ರಿ ಸರ್ಕಾರದ ಪತನಕ್ಕೆ ಕಾರಣರಾದವರಿಂದಲೇ ಸಿ.ಡಿ



ಬೆಂಗಳೂರು, ಮಾ. 9 - ಜೆಡಿಎಸ್-ಕಾಂಗ್ರೆಸ್ ನೇತೃತ್ವದ ನನ್ನ ಸರ್ಕಾರದ ಪತನಕ್ಕೆ ಕಾರಣರಾದವರೇ ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಸಿ.ಡಿ ಪ್ರಕರಣದ ಹಿಂದೆ ಇದ್ದಾರೆ ಎಂಬ ಸಂಶಯವನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರ ಸ್ವಾಮಿ ಇಂದಿಲ್ಲಿ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಮೇಶ್ ಸಹೋದರ ಬಿಜೆಪಿ ಶಾಸಕ ಬಾಲಚಂದ್ರ ಜಾರಕಿಹೊಳಿ 2+3+4 ಜನರ ತಂಡ ರಾಜಕೀಯ ಷಡ್ಯಂತ್ರ ಮಾಡಿದೆ ಎಂದು ಹೇಳಿಕೆ ಕೊಟ್ಟಿದ್ದಾರೆ ಎಂದರು.

ಅವರ ಹೇಳಿಕೆಯನ್ನು ಗಮನಸಿದರೆ, ನನ್ನ ಸರ್ಕಾರ ಕೆಡವಲು ಮುಂಬೈಗೆ ಕರೆದುಕೊಂಡು ಹೋದ ಇಬ್ಬರು ಮಹಾನ್ ನಾಯಕರೇ ನಂತರ ಮುಂಬೈಯಲ್ಲಿ ಅವರಿಗೆ ಆತಿಥ್ಯ ನೀಡಿದ ಮೂವರೇ ಮುಂಬೈನಿಂದ ಬೆಂಗಳೂರಿಗೆ ಕರೆತಂದ ನಾಲ್ಕು ಮಂದಿ ಇರಬಹುದು ಎಂದು ಶಂಕಿಸಿದ್ದಾರೆ. ಸರ್ಕಾರ ಕೆಡವಲು ಕರೆದುಕೊಂಡು ಹೋದವರು ಸಿ.ಡಿ. ಮಾಡಿ ಮಸಿ ಬಳಿಯುವ ಕೆಲಸ ಮಾಡಿರಬಾರದೇತಕ್ಕೆ? ಎಂದು ಪ್ರಶ್ನಿಸಿದರು.

ರಮೇಶ್ ರಾಸಲೀಲೆ ಪ್ರಕರಣ ಬಹಿರಂಗಗೊಳ್ಳುತ್ತಿದ್ದಂತೆ ಅಂದು ಮುಂಬೈನಲ್ಲಿ ಉಳಿದುಕೊಂಡಿದ್ದ ಇಂದಿನ ಆರು ಸಚಿವರು ಭಯಭೀತರಾಗಿ ತಮ್ಮ ವಿರುದ್ಧ ಯಾವುದೇ ರೀತಿಯ ಅಶ್ಲೀಲ ಚಿತ್ರಗಳು ಪ್ರಕಟಗೊಳ್ಳಬಾರದೆಂದು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ.

ಇವರು ಯಾವುದೇ ಅನೈತಿಕ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ ಎಂಬ ಆತ್ಮ ವಿಶ್ವಾಸ ಇದ್ದರೆ, ನ್ಯಾಯಾಲಯದ ಮೊರೆ ಏಕೆ ಹೋಗಬೇಕು? ಎಂದು ಜನ ಪ್ರಶ್ನಿಸುತ್ತಿದ್ದಾರೆ. ವಿಶೇಷ ವಿಮಾನದಲ್ಲಿ ಕರೆದುಕೊಂಡು ಹೋದವರು ನಂತರ ಇಂತಹ ಕೆಲಸಗಳನ್ನು ಯಾತಕ್ಕೆ ಮಾಡಿರಬಾರದು? ಎಂದು ಪ್ರಶ್ನಿಸಿದರು.

ಈ ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ 8 ಸಚಿವರು ಅಂದು ಸಂಪುಟಕ್ಕೆ ರಾಜೀನಾಮೆ ನೀಡಿ ಅವರೂ ಸೇರಿದಂತೆ 18 ಶಾಸಕರು ಸರ್ಕಾರದ ವಿರುದ್ಧ ಬಂಡಾಯ ಎದ್ದಿದ್ದರು. ಅವರೆಲ್ಲರೂ ನಾನು ಬೇಡ ಎಂದರೂ ನನ್ನ ಬಳಿ ಬಂದು ಚೆನ್ನೈ, ಹೈದರಾಬಾದ್, ಗೋವಾ ಸುತ್ತಿದರು. ಹೀಗೆ ಒಂದು ತಿಂಗಳು ನಾಟಕ ನಡೆಯಿತು, ಆಗ ಏತಕ್ಕೆ ಸಿ.ಡಿ. ಮಾಡಲಿಲ್ಲ ಮತ್ತು ಬಹಿರಂಗಗೊಳಿಸಲಿಲ್ಲ? ಈಗ ಏತಕ್ಕೆ ಹೀಗಾಯಿತು, ರಾಮ ರಾಜ್ಯ ತರುತ್ತೇವೆ ಎಂದು ಹೋದವರು ಈಗ ಸಿ.ಡಿ. ಭಯದಲ್ಲಿ ಬದುಕುತ್ತಿದಾರೆ ಎಂದು ಕುಟುಕಿದರು.

ನಾಲ್ಕು ಗೋಡೆಗಳ ಮಧ್ಯೆ ನಡೆಯುವ ವಿಚಾರವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವುದು ತಪ್ಪು ಎಂದು ಕಾನೂನೇ ಹೇಳುತ್ತದೆ, ಇಷ್ಟು ತಿಳಿದಿದ್ದೂ ಸಿ.ಡಿ ಬಹಿರಂಗಪಡಿಸಿದ್ದು ಯಾವ ಉದ್ದೇಶಕ್ಕೆ? ರಮೇಶ್ ಪಾಪದ ಮನುಷ್ಯ, ಆತನಿಗೆ ತಿಳಿದಿಲ್ಲ, ಈ ಪ್ರಕರಣದ ನಂತರ ಹಣ ಮಾಡಲು ನಮ್ಮ ಬಳಿಯೂ ಸಿ.ಡಿ ಇದೆ ಎಂದು ಕೆಲವರು ಹೇಳಿಕೊಂಡು ತಿರುಗುತ್ತಿದ್ದಾರೆ, ಅಂತಹವರ ವಿರುದ್ಧ ಸರ್ಕಾರವೇ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.

# ಸ್ಲಂ ನಿವಾಸಿಗಳಿಗೆ ಬಜೆಟ್ ನಿರಾಶಾದಾಯಕ : ಖಂಡನೆ

ದಾವಣಗೆರೆ, ಮಾ. 9- ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಮಂಡಿಸಿದ ಬಜೆಟ್‌ನಲ್ಲಿ ನಗರ ಪ್ರದೇಶಗಳಲ್ಲಿರುವ ಸ್ಲಂ ಜನರಿಗೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ನೀಡಿಲ್ಲ ಎಂದು ಸ್ಲಂ ಜನಾಂದೋಲನ ಕರ್ನಾಟಕ ಖಂಡಿಸಿದೆ.

ಬಜೆಟ್‌ನಲ್ಲಿ ವಸತಿ ಇಲಾಖೆಗೆ ನೀಡಿರುವ ಹಣದ ಮೊತ್ತ 2,990 ಕೋಟಿ ರೂ.ಗಳಾಗಿದ್ದು ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಎಷ್ಟು ಹಣವನ್ನು ಒದಗಿಸಲಾಗಿದೆ ಎಂಬ ಸ್ಪಷ್ಟತೆ ಇಲ್ಲ.

ವಲಯ 2ರ ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ಆದ್ಯತೆಯಲ್ಲಿ ನಗರ ಪ್ರದೇಶದ ಜನಸಂಖ್ಯೆಯ ಶೇ.40 ಜನರಿರುವ ಸ್ಲಂ ನಿವಾಸಿಗಳ ಕ್ಷೇಮಾಭಿವೃದ್ಧಿಗೆ ಹಣ ನೀಡದೆ ವಂಚಿಸಿರುವುದು, ವಂಚಿತ ಸಮುದಾಯಗಳನ್ನು ಮತ್ತಷ್ಟು ಕತ್ತಲೆಗೆ ತಳ್ಳಲಾಗಿದೆ.

ವಲಯ 3ರಲ್ಲಿ ಆರ್ಥಿಕ ಅಭಿವೃದ್ಧಿಗೆ ಪ್ರಚೋದನೆ ಅಂಶದಲ್ಲಿ ಕೊಳಚೆ ಪ್ರದೇಶ ನಿವಾಸಿಗಳಿಗೆ ವಸತಿ ಮತ್ತು ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಹಣ ಮೀಸಲಿರಿಸದೆ, ರಾಜ್ಯದಲ್ಲಿ ಬಲಾಢ್ಯ ಸಮುದಾಯಗಳ ಆರ್ಥಿಕ ಅಭಿವೃದ್ಧಿಗೆ ಪ್ರಚೋದನೆ ನೀಡಿ ಅಳಿವಿನಂಚಿನಲ್ಲಿರುವ ಸಣ್ಣಪುಟ್ಟ ಅಸ್ಪೃಶ್ಯ ಸಮುದಾಯಗಳನ್ನು ಹಾಗೂ ಅಲೆಮಾರಿ, ಹಿಂದುಳಿದ ಅಲ್ಪಸಂಖ್ಯಾತ ಸಮುದಾಯಗಳನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗುತ್ತಿದೆ.

ಕೊಳಚೆ ಪ್ರದೇಶಗಳ ಭೂ ಸ್ವಾಧೀನಕ್ಕೆ 1000 ಕೋಟಿ ರೂ. ಹಣ ಮೀಸಲಿಡಲು ಒತ್ತಾಯಿಸಿ, ಸ್ಲಂ ನಿವಾಸಿಗಳಿಗೆ ನಿರ್ಮಿಸುವ ಮನೆಗಳ ಘಟಕ ವೆಚ್ಚವನ್ನು 5ಲಕ್ಷಕ್ಕೆ ಹೆಚ್ಚಿಸಲು, ನಗರ ಪ್ರದೇಶದ ಬಡ ನಿವೇಶ/ವಸತಿ ರಹಿತರಿಗೆ ವಸತಿ ಕಲ್ಪಿಸಲು ಲ್ಯಾಂಡ್ ಬ್ಯಾಂಕ್ ಜಾರಿಗೊಳಿಸಲು ಸ್ಲಂ ಜನಾಂದೋಲನ ಒತ್ತಾಯಿಸಿತ್ತು. ಆದರೆ ಈ ಅಂಶಗಳನ್ನು ಪರಿಗಣಿಸದಿರುವುದು ಬಿಜೆಪಿ ಸರ್ಕಾರದ ಬಡ ಜನ ವಿರೋಧಿ ನೀತಿಯನ್ನು ಬಹಿರಂಗಗೊಳಿಸುತ್ತದೆ ಎಂದು ಸಂಘಟನೆ ತನ್ನ ಹೇಳಿಕೆಯಲ್ಲಿ ಟೀಕಿಸಿದೆ.

# ನಗರಕ್ಕೆ ನಾಳೆ 'ಜನ ಸಂಘಟನೆಗಾಗಿ ಸಂವಾದ ಯಾತ್ರೆ'

ದಾವಣಗೆರೆ, ಮಾ.9- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದ ವತಿಯಿಂದ ಪಕ್ಷ ಸಂಘಟನೆ ಸಲುವಾಗಿ ಹಮ್ಮಿಕೊಂಡಿರುವ 'ಜನ ಸಂಘಟನೆಗಾಗಿ ಸಂವಾದ ಯಾತ್ರೆ' ಮಾ.11 ರಂದು ಬೆಳಿಗ್ಗೆ 11ಕ್ಕೆ ನಗರಕ್ಕೆ ಆಗಮಿಸಲಿದ್ದು, ಈ ಸಂಬಂಧ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಸಮಿತಿ ಕಾರ್ಯಾಧ್ಯಕ್ಷ ಎ.ಅಬ್ದುಲ್ ಜಬ್ಬಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದಿನ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ರಾಜ್ಯಾಧ್ಯಕ್ಷ ವೈ. ಸೈಯ್ಯದ್ ಅಹ್ಮದ್, ರಾಜ್ಯ ಉಸ್ತುವಾರಿ ಡಾ. ಜಾಫರ್ ಅಹ್ಮದ್‌ಖಾನ್, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಬ್ಲಾಕ್ ಅಧ್ಯಕ್ಷರು ತಾಲ್ಲೂಕು, ವಾರ್ಡ್ ಅಧ್ಯಕ್ಷರು, ಅಲ್ಪಸಂಖ್ಯಾತರ ವಿಭಾಗದ ಎಲ್ಲಾ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೋರಿದರು.

ಪಕ್ಷ ಸಂಘಟನೆ ಮತ್ತು ಬಲವರ್ಧನೆಗಾಗಿ ಜನ ಸಂಘಟನೆಗಾಗಿ ಸಂವಾದ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಜಿಲ್ಲಾಧ್ಯಕ್ಷ ಕೆ.ಆರೀಫ್‌ಖಾನ್, ಕಿಶೋರ್ ಜೈನ್, ಮೊಹಮದ್ ಜಾಕೀರ್ ನಲ್ಲೂರು, ಎಂ. ದಾದಾಪೀರ್ ಕೊಡಪದ, ಬಷೀರ್ ಖಾನ್, ಮುಮ್ತಾಜ್ ಬೇಗಂ, ಜಬೀವುಲ್ಲಾ, ಅಲೆಗ್ಸಾಂಡರ್ ಜಾನ್, ಸೈಫುಲ್ಲಾ, ದಾದಾಪೀರ್, ರಾಜಾಭಕ್ಷಿ, ಅಬು ಸಾಲೇಹ ಮತ್ತಿತರರಿದ್ದರು.

## ಜಿ.ಎಂ.ಐ.ಟಿ.ಯಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 9- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಎಂ.ಬಿ.ಎ ಸಭಾಂಗಣದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರಾದ ಡಾ. ರಾಜೇಶ್ವರಿ ಜೆ. ಅಣ್ಣಿಗೇರಿ ಮಾತನಾಡಿದರು. ಪ್ರಾಂಶುಪಾಲ ಡಾ. ವೈ. ವಿಜಯ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಅಮೃತ, ಅನುಶ್ರೀ ಪ್ರಾರ್ಥಿಸಿದರು. ಮಹಿಳಾ ಸಬಲೀಕರಣದ ನಿರ್ದೇಶಕಿ ವೆಂಕಟಸುಮನಾ, ಆಡಳಿತಾಧಿಕಾರಿ ವೈ.ಯು. ಸುಭಾಷ್‌ಚಂದ್ರ ಉಪಸ್ಥಿತರಿದ್ದರು.

## ನಾಳೆ ರುದ್ರಾಭಿಷೇಕ

ದಾವಣಗೆರೆ, ಮಾ.9- ನಗರದ ಹಳೇಬೇತೂರು ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ನಾಡಿದ್ದು ದಿನಾಂಕ 11 ರಂದು ಬೆಳಿಗ್ಗೆ 5.30 ರಿಂದ ಸ್ವಾಮೀಜಿ ರುದ್ರಾಭಿಷೇಕ ನಡೆಯಲಿದೆ. ಮಾ.12 ರಂದು ಶುಕ್ರವಾರ ಸಂಜೆ 7 ಕ್ಕೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ ಜರುಗಲಿದೆ. ಡಾ. ಶಾಮನೂರು ಶಿವಶಂಕರಪ್ಪ, ಬಿ.ಸಿ.ಉಮಾಪತಿ ಆಗಮಿಸಲಿದ್ದಾರೆ.

## ಶಿವರಾತ್ರಿ : ವಿಶೇಷ ಪೂಜೆ

ದಾವಣಗೆರೆ, ಮಾ. 9- ನಗರದ ಲಿಂಗೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ದಿನಾಂಕ : 11ರ ಗುರುವಾರ ವಿಶೇಷ ಹೂವಿನ ಅಲಂಕಾರ ಮತ್ತು ಪೂಜಾ ಕಾರ್ಯಕ್ರಮಗಳಿದ್ದು, ಅಂದು ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1 ರವರೆಗೆ ಅಭಿಷೇಕವಿರುತ್ತದೆ ಎಂದು ಲಿಂಗೇಶ್ವರ ದೇವಸ್ಥಾನದ ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.

## ಶಿವರಾತ್ರಿ : ನಗರದಲ್ಲಿ ಪ್ರಾಣಿ ವಧೆ, ನಿಷೇಧ

ದಾವಣಗೆರೆ, ಮಾ.9- ಶಿವರಾತ್ರಿ ಪ್ರಯುಕ್ತ ಪಾಲಿಕೆಯ ವ್ಯಾಪ್ತಿಯಲ್ಲಿ ದಿ. 11.03.2021ರ ಗುರುವಾರ ಮಾಂಸದ ಉದ್ದಿಮೆ ನಡೆಸುತ್ತಿರುವ ಉದ್ದಿಮೆದಾರರು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.

ಮಾಂಸ ಮಾರಾಟ ಮಾಡಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ (ಪ್ರಭಾರ) ಹಾಗೂ ಸಹಾಯಕ ನಿರ್ದೇಶಕರು (ಪವೈಸೇ) ತಿಳಿಸಿದ್ದಾರೆ.

## ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಮಹಿಳಾ ದಿನಾಚರಣೆ




ದಾವಣಗೆರೆ, ಮಾ.9 - ನಗರದ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಿಪಿಐ ಶಿಲ್ಪಾ ಹಾಗೂ ರೋಟರಿ ಕ್ಲಬ್ ಸದಸ್ಯೆ ಶಿಖಾ ಪಾಟೀಲ್ ಅವರನ್ನು ಗೌರವಿಸಲಾಯಿತು. ಕೇಕ್ ಕತ್ತರಿಸುವ ಮೂಲಕ ಮಹಿಳಾ ದಿನ ಆಚರಿಸಲಾಯಿತು. ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮುಖ್ಯಸ್ಥ ಬೇಸಿಲ್ ರಾಜನ್, ಸಿಬ್ಬಂದಿ ವರ್ಗದವರು ಹಾಗೂ ಗ್ರಾಹಕರು ಭಾಗವಹಿಸಿದ್ದರು.

## ನಲ್ಲೂರು : ಶಿವಗಂಗಾ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ



ಚನ್ನಗಿರಿ, ಮಾ. 9 - ನಲ್ಲೂರಿನ ಮುಖಂಡರಾದ ಸಂತೋಷ್, ಪಿ.ಸಿ. ನಾಗರಾಜು, ಹರೀಶ್, ಎಸ್. ಶಿವಶಂಕರ್, ಅನಿಲ್‌ಕುಮಾರ್ ಹಾಗೂ ಚಿಪ್ಪರಗಿ ಸಮಾಜದ ಪಾಪುಳಿ ಮತ್ತು ಯು.ಕೆ. ನರೇಂದ್ರ ಹಾಗೂ ಅತಾವುಲ್ಲಾ ಸೇರಿದಂತೆ 200 ಕ್ಕೂ ಅಧಿಕ ಜನರು ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಈ ಸಂದರ್ಭದಲ್ಲಿ ನಲ್ಲೂರು ಗ್ರಾಮ ಪಂಚಾಯ್ತಿ ಸದಸ್ಯರಾದ ಬಂಡಿ ಸತೀಶ್, ಗುಡ್ಡಪ್ಪ ಹಾಗೂ ಮಲ್ಲೇಶಪ್ಪ ಕಿಸಾನ್ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಗೌಡ್ರು ಭರತ್ ಪಾಟೀಲ್, ಯುವ ಮುಖಂಡ ಮಧು ಪಾಟೀಲ್ ಹಾಗೂ ಮೋಹನ್ ಕುಮಾರ್ ಉಪಸ್ಥಿತರಿದ್ದರು.

## ಗಿಡಮೂಲಿಕೆ ಔಷಧಿ, ಜೀವನ ಶೈಲಿಯಿಂದ ಮಧುಮೇಹ ಗುಣಪಡಿಸಲು ಸಾಧ್ಯ

ದಾವಣಗೆರೆ, ಮಾ.9- ಕ್ರಮಬದ್ಧವಾದ ಜೀವನ ಶೈಲಿ ಮತ್ತು ಗಿಡಮೂಲಿಕೆ ಔಷಧದಿಂದ ಮಧುಮೇಹ (ಸಕ್ಕರೆ ಕಾಯಿಲೆ) ಟೈಪ್-2 ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ ಎಂದು ಚರ್ಮರೋಗ ತಜ್ಞ ಡಾ. ಬಸವರಾಜ್ ಮುದೇಗೌಡ್ರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಥಾರ್ ದೇಶದ ನಸೀಮ್ ಆಸ್ಪತ್ರೆಯಲ್ಲಿ ಚರ್ಮರೋಗ ತಜ್ಞರಾಗಿ ಸೇವೆ ಸಲ್ಲಿಸುತ್ತಿರುವ ತಮಗೂ ಕೂಡ ಕಳೆದ 25 ವರ್ಷಗಳಿಂದ ಸಕ್ಕರೆ ಕಾಯಿಲೆ ಇದೆ. ಸ್ವಯಂ ಪ್ರಯೋಗದಿಂದ ಕಾಯಿಲೆ ವಾಸಿ ಮಾಡಿಕೊಂಡಿದ್ದೇನೆ ಎಂದರು. ಟೈಪ್-1 ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಇನ್‌ಸುಲಿನ್ ಅವಶ್ಯಕತೆ ಇದೆ. ಟೈಪ್-2 ಸಕ್ಕರೆ ಕಾಯಿಲೆ ಗುಣಪಡಿಸಲು ಸಾಧ್ಯವಿಲ್ಲ ಎಂಬುದು ವೈದ್ಯಕೀಯ ಕ್ಷೇತ್ರದಲ್ಲಿ ಕೇಳಿ ಬರುವ ಮಾತು. ಆದರೆ, ಇದನ್ನು ಗುಣಪಡಿಸಲು ಸಾಧ್ಯವಿದೆ ಎಂಬುದು ತಮ್ಮ ವಾದ ಎಂದು ಹೇಳಿದರು.

ಚಿಕಿತ್ಸೆಗಾಗಿ ಆಶ್ರಯ ಆಸ್ಪತ್ರೆ 08192 224679 ಸಂಪರ್ಕಿಸಿ ಹೆಸರು ನೋಂದಾಯಿಸುವಂತೆ ಅವರು ಕೋರಿದರು. ಪತ್ರಿಕಾಗೋಷ್ಠಿಯಲ್ಲಿ ಅಬ್ದುಲ್ ಜಬ್ಬಾರ್, ಮೊಹಿದ್ ಅಹಮದ್ ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

66/11 ಕೆ.ವಿ.ಕತ್ತಿಗೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಕತ್ತಿಗೆ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಹೊನ್ನಾಳಿಯಲ್ಲಿ ದಸಂಸ ಪ್ರತಿಭಟನೆ

ದಲಿತ ವಿದ್ಯಾರ್ಥಿಗಳಿಗೆ ಶಾಲಾ-ಕಾಲೇಜು ಶುಲ್ಕ ಮತ್ತು ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ತಾಲ್ಲೂಕು ಕರ್ನಾಟಕ ದಲಿತ ಸಂಘರ್ಷ ಸಮಿತಿ ಇಂದು ಟಿ.ಬಿ. ಸರ್ಕಲ್‌ನಿಂದ ತಹಶೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಂಡಿದೆ ಎಂದು ರಾಜ್ಯ ಸಂಚಾಲಕ ಎಂ. ಗುರುಮೂರ್ತಿ, ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಹಾಗೂ ತಾಲ್ಲೂಕು ಸಂಚಾಲಕ ಎ.ಕೆ. ಪರಮೇಶ್ವರಪ್ಪ ಬೆನಕನಹಳ್ಳಿ, ರುದ್ರೇಶ್ ದಿಡಗೂರು ತಿಳಿಸಿದ್ದಾರೆ.

ರಕ್ತದಾನ, ಶ್ರೇಷ್ಠದಾನ


**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಹೊಸ ಹೊಸ ಮನೆ ಮಾರಾಟಕ್ಕಿವೆ**
30x50 west, 30x40 South, 30x38 west, 40x60 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಜಗಳೂರು: ವೈದ್ಯರು ಬೇಕಾಗಿದ್ದಾರೆ**
(Doctor For Clinic)
ಬಾಲಾಜಿ ಮೆಡಿಕಲ್ಸ್
ಭಾರತ್ ಟಾಕೀಸ್ ಎದುರು, ದಾವಣಗೆರೆ ರಸ್ತೆ, ಜಗಳೂರು.
ಮೊ ನಂ : 9900367130

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x50 ಪೂರ್ವ, 40x80 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಗ್ಲಾಸ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಹೊಸಬರಿಗೂ ಆದ್ಯತೆ.
95354 42711

**ನೆಲಮಂಗಲ ಸೊಂಡೆಕೊಪ್ಪ ರೋಡಿನ ತರಳಬಾಳು ನಗರದಲ್ಲಿ ಸೈಟು ಖರೀದಿಗೆ ಬೇಕಾಗಿದೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಸೈಟ್‌ಗಳು ಮಾರಾಟಕ್ಕಿವೆ**
1) 30x36 West, ಜಯನಗರದಲ್ಲಿ
2) 30x38 ವಿವೇಕಾನಂದ ಬಡಾವಣೆಯಲ್ಲಿ
3) 30x38 West, ಕಮರ್ಷಿಯಲ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಬೇಕಾಗಿದ್ದಾರೆ**
ಸ್ಯಾನಿಟರಿ ಹಾಗೂ ಪೈಪುಗಳ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ : ಬೆಳಿಗ್ಗೆ 12 ರಿಂದ 2 ರವರೆಗೆ
ಅಂದನೂರು ಸೆರಾಮಿಕ್ಸ್
ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಹತ್ತಿರ ಪಿ.ಬಿ. ರಸ್ತೆ, ದಾವಣಗೆರೆ.

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed.-02, BA, B.Ed. (Eng) -02, B.Sc. B.Ed.-3 M.Sc./M.Com/MBA-02
LITTLE CHAMPS GURUKULAM
Near HKR Circle, College Road, Nittuvalli, Davangere.
9060906039, 9844332559

**ಬೇಕಾಗಿದ್ದಾರೆ**
ಸ್ನಾಕ್ಸ್ ಮಾಡಲು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ವಿಳಾಸ: ರಸ್‌ರಂಗ್ ಜ್ಯೂಸ್ ಲ್ಯಾಂಡ್
BIET ಬಾಲಕರ ವಿದ್ಯಾರ್ಥಿನಿಲಯದ ಎದುರು ಸ್ವಾಮಿ ವಿವೇಕಾನಂದ ಬಡಾವಣೆ, 4ನೇ ಮುಖ್ಯರಸ್ತೆ, ನೂತನ ಕಾಲೇಜ್ ರಸ್ತೆ, ದಾವಣಗೆರೆ.
77950 53904

**ಗ್ಲಾಸ್ ಹೌಸ್ ಹತ್ತಿರ ಸೈಟ್ ಮಾರಾಟಕ್ಕಿದೆ**
ಉತ್ತರ ; 30x50
ದಕ್ಷಿಣ 30x40
98444 06587

**ಬಾತ್‌ರೂಂ ಗ್ರೌಟ್**
ಬಾತ್ ರೂಂನಲ್ಲಿ ಸಾಧಾರಣ ಗ್ರೌಟ್ ಮಾಡಿರುವುದರಿಂದ ಸೀಲಿಂಗ್‌ನಲ್ಲಿ ನೀರು ಲೀಕೇಜ್ ಆಗಿ ರೂಫ್ ದುರ್ಬಲ ಆಗಬಹುದು. ಅದಕ್ಕೆ ಪರ್ಮನೆಂಟಾದ ಗ್ರೌಟ್ ಮಾಡಿಸಿ ಕೊಂಡು ನಿಶ್ಚಿಂತರಾಗಿ, ಈ ಗ್ರೌಟ್ ಟೈಲ್ಸ್‌ಗೆ ಪರ್ಮನೆಂಟಾಗಿ ಫಿಕ್ಸ್ ಆಗಿರುತ್ತದೆ. ರಿಯಾಯಿತಿ ದರ.
81050 40110

**ಶಿಕ್ಷಕರು ಬೇಕಾಗಿದ್ದಾರೆ**
B.Ed, D.Ed, B.Com, M.Com ಆಗಿರುವ ಇಂಗ್ಲಿಷ್ ಅನುಭವವುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ.
ಸ್ಮಾರ್ಟ್ ಕಿಡ್ಸ್ ಪಬ್ಲಿಕ್ ಸ್ಕೂಲ್
RTO ಆಫೀಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
95358 06493, 89703 66639

**ಮಾರಾಟಕ್ಕಿವೆ**
ಉಪಯೋಗಿಸಿರುವ ಸೆಂಟ್ರಿಂಗ್ ಪ್ಲೈವುಡ್ ಶೀಟ್ ಮತ್ತು ಸಾರ್ವೆ ಪೋಲ್ಸ್ ಮಾರಾಟಕ್ಕಿವೆ. ಸಂಪರ್ಕಿಸಿ
99028 78035

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**Urgent Requirement**
Diploma/B.E. Civil - 20, 0-1 Year Experience.
ITI/Diploma Mechanical - 10
System Admin -3M/F
Accountant - 5M/F
Field Officer -10
Contact : 91132 99500

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ Or Any Degree.
ವಿಳಾಸ :
ಕಾವೇರಿ ಮೆಡಿ ಹೌಸ್ ಪ್ರೈ. ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ.

**ಭರಮಸಾಗರದಲ್ಲಿ ಸೈಟ್ ಮಾರಾಟಕ್ಕಿದೆ**
ಭರಮಸಾಗರದ ಪ್ರವಾಸಿ ಮಂದಿರದ ಪಕ್ಕದಲ್ಲಿ ಇರುವ 40 ಅಡಿ ಅಗಲ 125 ಅಡಿ ಉದ್ದವುಳ್ಳ ಸೈಟ್ ಮಾರಾಟಕ್ಕಿದೆ. ಕೊಳ್ಳಲಿಚ್ಛಿಸುವವರು ಸಂಪರ್ಕಿಸಿ :
ಮೊ. : 94486 67170

**ಮನೆ ಮಾರಾಟಕ್ಕಿದೆ**
ಮೂರು ಅಂತಸ್ತಿನ ಮನೆ (30x40) ಎಸ್ಸೆಸ್ ಬಡಾವಣೆ, ಬಿ ಬ್ಲಾಕ್, ಶಾ (Shah) ಅಪಾರ್ಟ್‌ಮೆಂಟ್ ಹತ್ತಿರ, 3ನೇ ಮೇನ್, 3ನೇ ಎಫ್. ಕ್ರಾಸ್, ದಾವಣಗೆರೆ.
99801 10284

**ಖಾಲಿ ನಿವೇಶನ ಬಾಡಿಗೆಗೆ ಇದೆ**
ಬೈಪಾಸ್ ಸರ್ವೀಸ್ ರೋಡ್‌ನಲ್ಲಿ District-17 ಹೋಟೆಲ್ ಹತ್ತಿರ 2500 ಚದುರಡಿಯ ಖಾಲಿ ನಿವೇಶನ ಬಾಡಿಗೆಗೆ ಇದೆ. ಸಂಪರ್ಕಿಸಿ :
78999 11454

**Raksha Charitable and Educational Trust (R.)**
REQUIRED
Pro's Staff for PU College Admission (Gents and ladies) Telecalling, Contact :
8296376716, 9916818369
Location: Davangere, Harihara, Chitradurga, Harapanalli, Channagiri

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ (Return Gift) 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
94805 64551, 91418 74551

**ಮನೆ ಮಾರಾಟಕ್ಕಿದೆ**
20x30 ಅಳತೆಯ, ದಕ್ಷಿಣ ದಿಕ್ಕಿಗಿರುವ ಡೋ.ನಂ. 3371/17/b4, 13ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ಶಂಕರಲೀಲಾ ಗ್ಯಾಸ್ ಏಜೆನ್ಸೀಸ್ ಹತ್ತಿರ 13 ವರ್ಷದ ಮನೆ ಮಾರಾಟಕ್ಕಿದೆ.
80734 38728

**ಜಮೀನು ಮಾರಾಟಕ್ಕೆ ಇದೆ**
ಜಗಳೂರು ತಾಲ್ಲೂಕು 15 ಎಕರೆ, ಚಳ್ಳಕೆರೆ ತಾಲ್ಲೂಕು 10 ಎಕರೆ
Contact : 9448136533
9481936533

**WANTED**
Wanted a Male graduate to work as a Hostel warden at Davanagere. Interested Graduates kindly Call on the below Number immediately.
73382 24444

**ಬೇಕಾಗಿದ್ದಾರೆ**
ಕಾವೇರಿ ಫಾರ್ಮಾದಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
SSLC Or PUC
ವಿಳಾಸ :
ಕಾವೇರಿ ಫಾರ್ಮಾ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೆಲಸಕ್ಕೆ ನುರಿತ ಯುವಕ ಅಥವಾ ಯುವತಿಯರು ಹಾಗೂ ನುರಿತ (ಅನುಭವಿ) ಮಾಸ್ಟರಗಳು ಬೇಕಾಗಿದ್ದಾರೆ.
ಮೊ. : 8431730550
98451 54400

**DHUDA APPROVED SITES FOR SALE AT HARIHARA IN INSTALMENTS**
93804 37609

**ಪೆಟ್ರೋಲ್ ಬೆಲೆ ಏರಿಕೆಯೇ!!!**
ನಿಮ್ಮ ಪೆಟ್ರೋಲ್ ಕಾರು & ಆಟೋಗಳನ್ನು CNG Gas Lovato KIT ಗಳಿಂದ ಚಲಾಯಿಸಿ 65% ಉಳಿತಾಯ ಮಾಡಿ
ಸಂಪರ್ಕಿಸಿ : ಎಸ್.ವಿ. ಆಟೋ ಟೆಕ್, ರಿಂಗ್ ರಸ್ತೆ, ಯಲ್ಲಮ್ಮನಗರ, ನವೋದಯ ಶಾಲೆ ಹತ್ತಿರ, ದಾವಣಗೆರೆ.
99451 25525, 93807 22272

**TO-LET SHOP**
B.T.GALLI, SRI CHOWDAMBIKA DEVI TEMPLE ROAD NEAR CLOCK TOWER DAVANGERE-577001
CONTACT
97392 65666

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆಯ ಅಂಗಡಿ ಕೆಲಸಕ್ಕೆ ಗುಮಾಸ್ತರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರ ಒಳಗೆ
99864 67206

**ಕೆಲಸಕ್ಕೆ ಬೇಕಾಗಿದ್ದಾರೆ**
ದ್ವಿಚಕ್ರ ವಾಹನ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ
88617 39401
85533 33626

**ಜಮೀನು ಮಾರಾಟಕ್ಕಿದೆ**
ಜಗಳೂರು ತಾಲ್ಲೂಕು ಭರಮಸಮುದ್ರ ಗ್ರಾಮದಲ್ಲಿ 8 ಎಕರೆ 15 ಗುಂಟೆ ಜಮೀನು ಮಾರಾಟಕ್ಕಿದೆ. NH 13ಕ್ಕೆ 1 ಕಿ.ಮೀ, ದಾವಣಗೆರೆ 60 ಕಿ.ಮೀ. ಚಿತ್ರದುರ್ಗಕ್ಕೆ 30 ಕಿ.ಮೀ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ
96326 79129, 96118 82297

**ಮನೆ ಬಾಡಿಗೆಗೆ ದೊರೆಯುತ್ತದೆ**
First Floorನಲ್ಲಿ 2BHK ಮನೆ, ಬೋರ್ ಹಾಗೂ ನಲ್ಲಿ ನೀರಿನ ಸೌಲಭ್ಯವಿದೆ.
ವಿಳಾಸ : ನಂ. 41, ಎ ಬ್ಲಾಕ್, 5ನೇ ಮುಖ್ಯರಸ್ತೆ, ದೇವರಾಜ್ ಅರಸ್ ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ದಾವಣಗೆರೆ.
88927 46603

**WANTED**
Candidates PUC/ Degree to work in Harihar. Salary + Incentive
93804 37609

**ROOM FOR RENT**
2nd Floor, SS Layout, B Block, 6th Cross, 4th Main, Geetha Nivas.
89711 63644

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**Computer Faculty WANTED**
Part/Full Time
MS Office, DTP, Tally is a Must.
97424 05888

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮನೆ ಲೀಸ್‌ಗೆ ಇದೆ**
ಆಂಜನೇಯ ಬಡಾವಣೆಯ 15ನೇ ಕ್ರಾಸ್‌ನಲ್ಲಿ ಮನೆ ಲೀಸ್‌ಗೆ ಇದೆ. (11 ಲಕ್ಷಕ್ಕೆ) ಸಸ್ಯಹಾರಿಗಳಿಗೆ ಮಾತ್ರ
83105 31272
86180 30217

**ಬೇಕಾಗಿದ್ದಾರೆ**
ಮಲ್ಟಿಪ್ಲೆಕ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಮೈಕ್ರೋನ್ಯೂಟ್ರಿಯಂಟ್ ಕಂಪನಿಯಲ್ಲಿ 5 ವರ್ಷ ಕೆಲಸ ಮಾಡಿರುವ ಅನುಭವ ಹೊಂದಿರಬೇಕು.
ಸ್ಥಳ : ಚಳ್ಳಕೆರೆ, ಚಿತ್ರದುರ್ಗ, ಹರಿಹರ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99455 47626, 99457 13454, 86605 93957

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ನೇರವಾಗಿ ಸಂಪರ್ಕಿಸಿ. ವಿಳಾಸ ಎಂಸಿಸಿ. 'ಎ' ಬ್ಲಾಕ್, ರೆಡ್ಡಿ ಬಿಲ್ಡಿಂಗ್ ಹತ್ತಿರ
83103 14540

**WANTED ADMINISTRATOR**
Vibrant, Enthusiast and experienced, graduate Person For Service to Run Reputed for the Past 45 years, Our Eight Educational Intitutions. Remuneration, Salary Around R. 25000/- Pm Or More Contact :
SKP VIDYA PEETHA
PJ EXTENSION, DAVANGERE.
Ph. : 98440 61469
98440 65235 99727 00084

**WANTED DELIVERY BOYS**
ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
Age limit: 21 to 25 years
Qualification : SSLC
Preferably Davangere city candidates
Contact:
Jain Enterprises
Chowkipet Chigateri Galli, Near Karnataka Bank ATM, Davangere.
98445 55551
98445 09222

**JOBS**
MCS ACADEMY
Training & Placement Cell
98444 92888

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ.
110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ.
90085 36467

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಚಿತ್ರಮಂದಿರದಲ್ಲಿ ಕ್ಯಾಂಟೀನ್ ನಿರ್ವಹಣೆ ಮಾಡಿಕೊಂಡು ಹೋಗಲು 4 ಜನ ಕ್ಯಾಂಟೀನ್ ಮ್ಯಾನೇಜರ್ ಹಾಗೂ 4 ಜನ ಹೌಸ್ ಕೀಪಿಂಗ್ ಕೆಲಸಗಾರರು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
98861 22787, 73539 50027

**ತಕ್ಷಣ ಬೇಕಾಗಿದ್ದಾರೆ**
IMPULSE ಕಂಪನಿಗೆ 10th, PUC, Diploma & Degree ಆದ ಯುವಕರು AGE (18-24) Earn (8000-16000) PM 1photo Resume, Adhar xerox ನೊಂದಿಗೆ
81056 00262



## ಗುಳ್ಳಮ್ಮದೇವಿ ದೇವಸ್ಥಾನದ ವಾರ್ಷಿಕೋತ್ಸವ: ಹೋಮ

ದಾವಣಗೆರೆ, ಮಾ.9- ನಗರದ ಪಿಸಾಳೆ ಕಾಂಪೌಂಡ್‌ನಲ್ಲಿರುವ ಶ್ರೀ ಗುಳ್ಳಮ್ಮದೇವಿ ದೇವಸ್ಥಾನದ 3ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಮಂಗಳವಾರ ಗಣ ಹೋಮ, ನವಗ್ರಹ ಹೋಮ, ದೇವಿ ಹೋಮ ಹಾಗೂ ಪೂರ್ಣಾಹುತಿ ನಡೆಯಿತು.

# ಪ್ರತಿಪಕ್ಷಗಳ ಸದಸ್ಯರಿಗೆ ಡಿಜಿಟಲ್ ತಡೆ

**ಚೌಧರಿ ಆರೋಪ**

ನವದೆಹಲಿ, ಮಾ. 9 – ಲೋಕಸಭೆಯಲ್ಲಿ ಪ್ರತಿಪಕ್ಷದ ಸದಸ್ಯರಿಗೆ ಡಿಜಿಟಲ್ ತಡೆ ಹಾಕಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಆರೋಪಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಕಲಾಪ ಆರಂಭವಾದಾಗ ಮಾತನಾಡಿದ ಚೌಧರಿ, ಸರ್ಕಾರವೇ ಆಗಲಿ - ಪ್ರತಿಪಕ್ಷವೇ ಆಗಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ. ಆದರೆ, ಸದನದಲ್ಲಿ ಡಿಜಿಟಲ್ ಪಕ್ಷಪಾತ ನಡೆಯುತ್ತಿದೆ ಎಂದರು.

ಸರ್ಕಾರ ಹೇಳಿದ್ದು ಹಾಗೂ ಮಾಡಿದ್ದೆಲ್ಲಾ ದೂರದರ್ಶನದಲ್ಲಿ ಬರುತ್ತಿದೆ. ಆದರೆ, ಪ್ರತಿಪಕ್ಷಗಳು ದೂರದರ್ಶನದಲ್ಲಿ ಬರುತ್ತಿಲ್ಲ. ಪ್ರತಿಪಕ್ಷಗಳ ಮೇಲೆ ನಿರ್ಬಂಧ ಹೇರಲಾಗುತ್ತಿದೆ ಎಂದು ಹೇಳಿದರು.

ನಾವು ಮಾಡುವ ಕೆಲಸಗಳನ್ನು ತಡೆಯಲಾಗುತ್ತಿದೆ. ಈ ತಡೆ ನಿಲ್ಲಬೇಕು. ಕ್ಯಾಮರಾಗಳು ಪ್ರತಿಯೊಬ್ಬರ ಕಡೆಗೂ ಇರಬೇಕು ಎಂದು ಚೌಧರಿ ಹೇಳಿದರು. ಈ ಸಂದರ್ಭದಲ್ಲಿ ಪ್ರತಿಪಕ್ಷವಾದ ಕಾಂಗ್ರೆಸ್ ಸದಸ್ಯರು ಸದನದ ಬಾವಿಗೆ ನುಗ್ಗಿ ಪ್ರತಿಭಟನೆ ನಡೆಸುತ್ತಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, ದೇಶಕ್ಕೆ ಈ ಅರಾಜಕತೆ ತೋರಿಸಬೇಕು ಎಂದು ಪ್ರತಿಪಕ್ಷದ ಗೌರವಾನ್ವಿತ ನಾಯಕರು ಬಯಸುತ್ತಿದ್ದಾರೆಯೇ? ಎಂದು ಕೇಳಿದರು.

ಪ್ರತಿಪಕ್ಷ ಯಾವುದೇ ವಿಷಯದ ಚರ್ಚೆ ಬಯಸುತ್ತಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಆಕ್ಷೇಪಿಸಿದರು.

# ಜಿಎಸ್ಟಿ ಅರ್ಥವಾಗದಷ್ಟು ತಿದ್ದುಪಡಿ, ಕೊರೊನಾ ಸಂಕಷ್ಟದಲ್ಲಿ ತೆರಿಗೆ ಒತ್ತಡ : ಅಥಣಿ ವೀರಣ್ಣ




**ಜಿ.ಎಸ್.ಟಿ. ಮಾಹಿತಿ ಕಾರ್ಯಕ್ರಮ**

ದಾವಣಗೆರೆ, ಮಾ. 9 – ಸರ್ಕಾರ ಪೂರ್ವಸಿದ್ಧತೆ ಇಲ್ಲದೇ ಅವಸರದಿಂದ ಜಿ.ಎಸ್.ಟಿ. ಜಾರಿಗೆ ತಂದ ನಂತರ, ನಿರಂತರ ತಿದ್ದುಪಡಿಗಳನ್ನು ತಂದು ಅರ್ಥ ಮಾಡಿಕೊಳ್ಳುವುದೇ ಕಷ್ಟ ಮಾಡಿದೆ. ಇದರ ನಡುವೆ, ಕೊರೊನಾ ಸಂಕಷ್ಟದಲ್ಲೇ ತೆರಿಗೆಗೆ ಒತ್ತಡ ಹೇರುತ್ತಿದೆ ಎಂದು ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ವತಿಯಿಂದ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ಜಿ.ಎಸ್.ಟಿ. ಮಾಹಿತಿ ಕಾರ್ಯಕ್ರಮ'ದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಪ್ರತಿದಿನ ವಾಟ್ಸಾಪ್‌ಗೆ ಕಾಯ್ದೆ ತಿದ್ದುಪಡಿಯಾದ ವರದಿಗಳು ಬರುತ್ತಿವೆ. ಕೊರೊನಾ ಕಾರಣದಿಂದಾಗಿ ಜನರು ಮನೆಯಲ್ಲಿರುವ ಪರಿಸ್ಥಿತಿ ಬಂದಿರುವಾಗಲೇ, ಕೇಂದ್ರ ಸರ್ಕಾರ ಜಿ.ಎಸ್.ಟಿ. ಕಾಯ್ದೆಗೆ 30 ತಿದ್ದುಪಡಿಗಳನ್ನು ತಂದಿದೆ. ಲೆಕ್ಕ ಪರಿಶೋಧಕರು ಹಾಗೂ ತೆರಿಗೆ ಸಲಹೆಗಾರರಿಗೇ ತಿದ್ದುಪಡಿ ಅರ್ಥವಾಗದಿದ್ದರೆ ವ್ಯಾಪಾರಿಗಳಿಗೆ ತಿಳಿಸುವುದಾದರೂ ಹೇಗೆ? ಎಂದವರು ಪ್ರಶ್ನಿಸಿದರು.

ಆದಾಯ ತೆರಿಗೆ ಇಲಾಖೆ ಜಾರಿಗೆ ತಂದಿರುವ ಕರ ಸಮಾಧಾನ ವ್ಯವಸ್ಥೆ ಹೆಚ್ಚು ಉಪಯುಕ್ತವಾಗಿಲ್ಲ. ಕೊರೊನಾ ಸಂದರ್ಭದಲ್ಲಿ ಜನರು ಸಂಕಷ್ಟದಲ್ಲಿ ಸಿಲುಕಿರುವಾಗ, ನಾವು ಹೇಳಿದಂತೆ ಪೂರ್ಣ ತೆರಿಗೆ ಪಾವತಿಸಿ ವಿನಾಯಿತಿ ಪಡೆಯಿರಿ ಎಂದರೆ ಪ್ರಯೋಜನವಾಗದು ಎಂದು ವೀರಣ್ಣ ಹೇಳಿದರು.

ಜಿ.ಎಸ್.ಟಿ. ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಬೇಕಿತ್ತು. ಹಾಗೆ ಮಾಡದೇ ನೇರವಾಗಿ ಜಾರಿಗೆ ತರಲಾಗಿದೆ. ಇದರಿಂದಾಗಿ ತಪ್ಪುಗಳು ಬಹಳಷ್ಟಿವೆ. ಈ ತಪ್ಪುಗಳನ್ನು ಸವಾಲಾಗಿ ಸ್ವೀಕರಿಸಿ ಕಾರ್ಯ ನಿರ್ವಹಿಸಬೇಕಿದೆ ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ (ಆಡಳಿತ) ರಮೇಶ್ ಗೌಡ, ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಅಧಿಕಾರಿಗಳು ಸುಮ್ಮನೆ ಮನೆಯಲ್ಲಿರಬಾರದು ಎಂದು ಜಿ.ಎಸ್.ಟಿ. ಕಾಯ್ದೆಗೆ 30ಕ್ಕೂ ಹೆಚ್ಚು ತಿದ್ದುಪಡಿಗಳನ್ನು ತರಲಾಗಿದೆ ಎಂದು ತಮಾಷೆಯಾಗಿ ಹೇಳಿದರಲ್ಲದೇ, ಈ ತಿದ್ದುಪಡಿಗಳಲ್ಲಿ ಮತ್ತೆ ಬದಲಾವಣೆ ತರಬೇಕಾದರೆ ಜಿ.ಎಸ್.ಟಿ. ಮಂಡಳಿ ಕ್ರಮ ತೆಗೆದುಕೊಳ್ಳಬೇಕು. ಪ್ರಸಕ್ತ ಕಾಯ್ದೆ ಅರ್ಥ ಮಾಡಿಕೊಳ್ಳುವುದರಿಂದ ಪರಿಹಾರ ಸಾಧ್ಯ ಎಂದು ಹೇಳಿದರು.

ವೇದಿಕೆಯ ಮೇಲೆ ವಾಣಿಜ್ಯ ತೆರಿಗೆ ಇಲಾಖೆಯ ಇ-ಆಡಿಟ್ ಹೆಚ್ಚುವರಿ ಆಯುಕ್ತ ಮುರುಳಿ ಕೃಷ್ಣ, ಇಲಾಖೆಯ ಜಂಟಿ ಆಯುಕ್ತ (ಮೇಲ್ಮನವಿ) ಶ್ರೀನಿವಾಸ್, ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಗೌರವಾಧ್ಯಕ್ಷ ಬಿ.ಜಿ. ಬಸವರಾಜಪ್ಪ, ಉಪಾಧ್ಯಕ್ಷ ಹೆಚ್.ಎಸ್. ಮಂಜುನಾಥ್ ಉಪಸ್ಥಿತರಿದ್ದರು.

ಸಂಘದ ಅಧ್ಯಕ್ಷ ಜಂಬಗಿ ರಾಧೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಎಂ.ಡಿ. ರೇವಣಸಿದ್ದಯ್ಯ ಸ್ವಾಗತಿಸಿದರು. ನಿರ್ದೇಶಕ ಸಿ. ವಿನಯ್ ವಂದಿಸಿದರು.

**ಸರ್ಕಾರ ಲೆಕ್ಕ ಪರಿಶೋಧಕರ 'ಕಟ್' ಮಾಡಿದೆ**

ತೆರಿಗೆ ಕಡಿಮೆ ಪಾವತಿಯಾಗಲೂ ಲೆಕ್ಕ ಪರಿಶೋಧಕರೇ ಕಾರಣ ಎಂದು ಭಾವಿಸಿರುವ ಕೇಂದ್ರ ಸರ್ಕಾರ, ನಮ್ಮನ್ನು 'ಕಟ್' ಮಾಡಲು ಫೇಸ್‌ಲೆಸ್ (ಮುಖಾಮುಖಿ ರಹಿತ) ವ್ಯವಸ್ಥೆ ಜಾರಿಗೆ ತಂದಿದೆ. ಈಗ ಟ್ರಿಬ್ಯೂನಲ್ ಸಹ ಫೇಸ್‌ಲೆಸ್ ಆಗಿದೆ ಎಂದು ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಹೇಳಿದ್ದಾರೆ.

ಸರ್ಕಾರ ನೋಟುಗಳ ಅಮಾನ್ಯೀಕರಣ ಮಾಡಿದ ನಂತರ ಶೇ.98ರಷ್ಟು ನೋಟುಗಳು ಬ್ಯಾಂಕಿಗೆ ವಾಪಸ್ ಬಂದವು. ಸರ್ಕಾರ ನಿರೀಕ್ಷಿಸಿದಷ್ಟು ಕಪ್ಪು ಹಣ ಸಿಗಲಿಲ್ಲ. ಇದರ ಹಿಂದೆ ಗುಜರಾತ್‌ನ ಕೆಲ ಲೆಕ್ಕ ಪರಿಶೋಧಕರೇ ಕಾರಣ. ಲೆಕ್ಕ ಪರಿಶೋಧಕರು ಜನರಿಗೆ ತಪ್ಪು ಮಾರ್ಗದರ್ಶನ ಮಾಡಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ದೆಹಲಿಯಲ್ಲಿ ಸ್ಪಷ್ಟವಾಗಿ ಹೇಳಿದ್ದರು ಎಂದೂ ವೀರಣ್ಣ ತಿಳಿಸಿದ್ದಾರೆ.

## ತಾ.ಪಂ. ಅಧ್ಯಕ್ಷ ಸ್ಥಾನಕ್ಕೆ ಶ್ರೀದೇವಿ ಮಂಜಪ್ಪ ರಾಜೀನಾಮೆ



ಹರಿಹರ, ಮಾ.9- ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಸ್ಥಾನಕ್ಕೆ ಎಚ್.ಎಸ್. ಶ್ರೀದೇವಿ ಮಂಜಪ್ಪ ರಾಜೀನಾಮೆ ನೀಡಿದ್ದಾರೆ.

ನಾಲ್ಕು ವರ್ಷ ಒಂಭತ್ತು ತಿಂಗಳು ಅಧ್ಯಕ್ಷರಾಗಿ ಶ್ರೀದೇವಿ ಅವರು ಕಾರ್ಯ ನಿರ್ವಹಿಸಿದ್ದು, ಉಳಿದ ಮೂರು ತಿಂಗಳ ಅವಧಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಫೆ. 22 ರಂದು ನೀಡಿದ್ದಾರೆ.

ಪಂಚಾಯತ್ ರಾಜ್ ಅಧಿನಿಯಮದಂತೆ ನಿಗದಿತ ಅವಧಿಯೊಳಗೆ ರಾಜೀನಾಮೆ ನೀಡಿರುವುದರಿಂದ ಅಧ್ಯಕ್ಷ ಸ್ಥಾನ ತೆರವಾಗಿರುವುದಾಗಿ ತಿಳಿಸಿರುವ ಜಿಲ್ಲಾಧಿಕಾರಿಗಳು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವಂತೆ ಅಧಿಕೃತ ಆದೇಶ ಪತ್ರವನ್ನು ಹೊರಡಿಸಿದ್ದಾರೆ.

ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಅಧ್ಯಕ್ಷ ಸ್ಥಾನಕ್ಕೆ ಆದಾಪುರ ವೀರಭದ್ರಪ್ಪ ಮುಂದಿನ ಮೂರು ತಿಂಗಳ ಅವಧಿಗೆ ಅಧ್ಯಕ್ಷರಾಗುವ ಸಾಧ್ಯತೆ ಹೆಚ್ಚಾಗಿದ್ದು, ಕಾದು ನೋಡಬೇಕಾಗಿದೆ.

## ವಾಣಿಜ್ಯ ಮೆಸೇಜ್‌ಗಳ ನೂತನ ನಿಯಮಗಳಿಗೆ ಒಂದು ವಾರ ತಡೆ

ನವದೆಹಲಿ, ಮಾ. 9 –ಬ್ಯಾಂಕಿಂಗ್ ಪಾವತಿ ಮತ್ತಿತರೆ ವ್ಯವಹಾರಗಳಿಗೆ ಸಂಬಂಧಿಸಿದಂತೆ ಎಸ್.ಎಂ.ಎಸ್. ಹಾಗೂ ಒ.ಟಿ.ಪಿ. ಪೂರೈಕೆಯಲ್ಲಿ ತೊಡಕುಗಳು ಕಂಡು ಬಂದ ನಂತರ ಟೆಲಿಕಾಂ ನಿಯಂತ್ರಕ ಟ್ರಾಯ್, ವಾಣಿಜ್ಯ ಮೆಸೇಜ್‌ಗಳಿಗೆ ಸಂಬಂಧಿಸಿದ ನೂತನ ನಿಯಮಗಳನ್ನು ಒಂದು ವಾರ ಕಾಲ ತಡೆದಿದೆ. ಸೋಮವಾರದಿಂದ ಹೊಸ ವ್ಯವಸ್ಥೆ ಜಾರಿಗೆ ತರಲಾಗಿತ್ತು. ಒಂದು ವಾರ ಹೆಚ್ಚುವರಿ ಸಮಯ ನೀಡಿರುವ ಕಾರಣದಿಂದ ವಾಣಿಜ್ಯ ಸಂಸ್ಥೆಗಳು ಹೊಸ ಪದ್ಧತಿಗೆ ಹೊಂದಿಕೊಳ್ಳಲು ನೆರವಾಗಲಿದೆ.

ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್ ಪಾವತಿ ಹಾಗೂ ಇತರೆ ಸೇವೆಗಳಿಗೆ ಸಂಬಂಧಿಸಿದ ಎಸ್.ಎಂ.ಎಸ್. ಹಾಗೂ ಒ.ಟಿ.ಪಿ. ಕಳಿಸಲು ಸೋಮವಾರ ವ್ಯಾಪಕ ಸಮಸ್ಯೆಯಾಗಿತ್ತು. ಶೇ.40ರಷ್ಟು ಎಸ್.ಎಂ.ಎಸ್.ಗಳು ವಿಳಂಬ ಹಾಗೂ ವೈಫಲ್ಯ ಎದುರಿಸಿದ್ದವು ಎಂದು ಕೆಲ ವರದಿಗಳು ತಿಳಿಸಿವೆ.

ರೈಲ್ವೆ ಟಿಕೆಟ್ ಹಾಗೂ ಕೊರೊನಾ ಲಸಿಕೆಯ ಕೊ-ವಿನ್ ನೋಂದಣಿಯಲ್ಲೂ ತೊಡಕುಗಳು ಉಂಟಾಗಿದ್ದವು.

# ಮಹಿಳೆಯರ ಅಂತರಂಗದ ಮಿಡಿತ ಬರಹಗಳ ಮೂಲಕ ಹೊರಹೊಮ್ಮಲಿ




**ಶ್ರೀಮತಿ ಆಶಾ ಕಲ್ಲನಗೌಡರ್ ಅವರ 'ಅಂತರಂಗದ ಧ್ವನಿ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ**

ದಾವಣಗೆರೆ, ಮಾ. 9- ಮಹಿಳೆಯರ ಅಂತರಂಗದಲ್ಲಿನ ಮಿಡಿತಗಳು ಬರಹಗಳ ಮೂಲಕ ಹೊರಹೊಮ್ಮಬೇಕಿದೆ. ತಮಗೆ ತಿಳಿದಿದ್ದನ್ನು ಬರೆಯುವ ಮೂಲಕ ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಕರೆ ನೀಡಿದರು.

ನಗರದ ಜಾಗೃತ ಮಹಿಳಾ ಸಂಘದಲ್ಲಿ ಮಂಗಳವಾರ ಶ್ರೀಮತಿ ಆಶಾ ಕಲ್ಲನಗೌಡರ್ ಅವರ 'ಅಂತರಂಗದ ಧ್ವನಿ' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಸಾಹಿತ್ಯ ಸಮಾಜಕ್ಕೆ ಹಿಡಿದ ಕನ್ನಡಿ. ಎಲ್ಲರೂ ಒಂದೊಂದು ರೀತಿಯ ಲೋಕಾನುಭವದ ದೃಷ್ಟಿಕೋನದಲ್ಲಿ ಸಮಾಜವನ್ನು ನೋಡುತ್ತೇವೆ. ಆದರೆ ಸಮಾಜ ಮಾತ್ರ ಒಂದೇ ರೀತಿ ಇರುತ್ತದೆ. ಆಶಾ ಕಲ್ಲನಗೌಡರ್ ಅವರು ಸಹ ತಮ್ಮದೇ ಆದ ದೃಷ್ಟಿಕೋನದಲ್ಲಿ ಸಮಾಜವನ್ನು ನೋಡಲು ಪ್ರಯತ್ನ ಪಟ್ಟಿದ್ದಾರೆ. ಅವರ ಬರವಣಿಗೆಗಳಲ್ಲಿ ಸಾಮಾಜಿಕ ಕಳಕಳಿ ಇದೆ ಎಂದರು.

ವಿರಳವಾದ ಧನಾತ್ಮಕ ವಾತಾವರಣವನ್ನೇ ಪೂರಕವಾಗಿ ಬಳಸಿಕೊಂಡು ಪ್ರತಿ ವರ್ಷವೂ ಒಂದೊಂದು ಪುಸ್ತಕಗಳನ್ನು ಬರೆಯುವಂತಾಗಲಿ ಎಂದು ಆಶಿಸಿದರು.

ಹೆಣ್ಣು ಜನಿಸುತ್ತಲೇ ಮಗಳಾಗಿ, ಅಕ್ಕ-ತಂಗಿಯಾಗಿ, ಪತ್ನಿಯಾಗಿ, ತಾಯಿಯಾಗಿ ನಂತರ ಅಜ್ಜಿಯಾಗಿ ವಿವಿಧ ಪಾತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಾಳೆ. ಆದರೆ ಆ ಹೆಣ್ಣು ತಾನಾಗುವುದು ಯಾವಾಗ? ಎಂದು ಪ್ರಶ್ನಿಸಿದ ಜಿಲ್ಲಾಧಿಕಾರಿ, ಹೆಣ್ಣಿನ ಅಂತರಂಗ ದೊಳಗೆ ಪ್ರತಿ ದಿನ ಅನೇಕ ವಿಚಾರಗಳು ಬರಹದ ಮೂಲಕ ಹೊರ ಬರಬೇಕು ಎಂದರು.

'ಅಂತರಂಗದ ಧ್ವನಿ' ಪುಸ್ತಕದ ಕುರಿತು ಮಾತನಾಡಿದ ಶಿಕ್ಷಕರೂ, ಸಾಹಿತಿಗಳೂ ಆದ ನಾಗರಾಜ ಸಿರಿಗೆರೆ, ಕೃತಿಯಲ್ಲಿರುವ ಎಲ್ಲಾ ಲೇಖನಗಳೂ ಸಾಮಾಜಿಕ ಕಳಕಳಿಯನ್ನು ಒಳಗೊಂಡಿವೆ. ಲೇಖಕಿ ತನ್ನ ಒಡಲಾಳದ ಧ್ವನಿಯಿಂದ ಪ್ರತಿಯೊಬ್ಬರನ್ನೂ ಎಚ್ಚರಿಸುವ ಕೆಲಸ ಮಾಡಿದ್ದಾರೆ. ಪ್ರತಿಯೊಬ್ಬರೂ ಇದೇ ರೀತಿ ತಮ್ಮನ್ನು ಅವಲೋಕಿಸಿಕೊಂಡಾಗ ಸ್ವಸ್ಥ ಸಮಾಜ ನಿರ್ಮಿಸಲು ಸಾಧ್ಯವಿದೆ ಎಂದರು.

ಮಹಿಳೆಯರು ಕೇವಲ ಅಡುಗೆ ಮನೆಯ ಸಾಹಿತ್ಯಕ್ಕೆ ಸೀಮಿತ ಎಂಬ ಚೌಕಟ್ಟನ್ನು ಮೀರಿ, ಸಾಮಾಜಿಕ ಕಳಕಳಿಯ ಪುಸ್ತಕಗಳನ್ನು ಪ್ರಕಟಿಸುವುದು ಶ್ಲಾಘನೀಯ. ಎಲ್ಲರನ್ನೂ ಜಾಗೃತಗೊಳಿಸುವ ಈ ಕೃತಿ ಸಮಾಜದ ಆಸ್ತಿಯಾಗಿದ್ದು, ಎಲ್ಲರನ್ನೂ ತಲುಪುವ ಅಗತ್ಯವಿದೆ ಎಂದರು.

ಸಾಹಿತಿ ಹಾಗೂ ಆರೋಗ್ಯ ಇಲಾಖೆಯ ಸಹಾಯಕ ಆಡಳಿತ ಅಧಿಕಾರಿ ಡಾ.ಆನಂದ್ ಋಗ್ವೇದಿ ಸಹ ಪುಸ್ತಕದ ಕುರಿತು ಮಾತನಾಡಿದರು. ಜಾಗೃತ ಮಹಿಳಾ ಸಂಘದ ಅಧ್ಯಕ್ಷೆ ಪ್ರೊ.ಬಿ. ವಿಮಲಾದಾಸ್ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಆಶಾ ಕಲ್ಲನಗೌಡರ್ ಇತರರು ಉಪಸ್ಥಿತರಿದ್ದರು.

**ಪತ್ನಿಗೆ ಪೆನ್ನು ನೀಡಿದ ಜಿಲ್ಲಾಧಿಕಾರಿ ಬೀಳಗಿ**

ತನಗನ್ನಿಸಿದ್ದನ್ನು ಬರೆಯುವಂತೆ ನಿನ್ನೆ ಪತ್ನಿಗೆ ಪೆನ್ನು ನೀಡಿದ್ದಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಮಹಿಳೆ ಮನಸ್ಸಿನಲ್ಲಿರುವ ವಿಚಾರಗಳನ್ನು ಬರೆಯಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ನಿಗೆ ಪೆನ್ನು ನೀಡಿದ್ದೇನೆ. ಮುಂಜಾನೆ ನನ್ನ ಪತ್ನಿ ಪೆನ್ನು ಹಾಗೂ ಡೈರಿಯನ್ನು ಕೈಯ್ಯಲ್ಲಿಡಿದುಕೊಂಡು ನೋಡುವುದನ್ನು ಕಂಡಾಗ, ಬರೆಯಲು ಮುಹೂರ್ತ ಕೂಡಿಬರಬಹುದು ಎಂದು ಮನಸ್ಸಿನಲ್ಲಿಯೇ ಅಂದು ಕೊಂಡೆ ಎಂದು ಜಿಲ್ಲಾಧಿಕಾರಿ ಸ್ವಾರಸ್ಯಕರವಾಗಿ ಹೇಳಿದರು. ತಮಗನ್ನಿಸಿದ್ದನ್ನು ಬರೆಯಲು ರೂಢಿ ಮಾಡಿಕೊಳ್ಳುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುವಂತೆ ಮಹಿಳೆಯರಿಗೆ ಸೂಚ್ಯವಾಗಿ ಹೇಳಿದರು.

## ಬ್ರಿಟನ್ ಸಂಸತ್ತಿನಲ್ಲಿ ಕೃಷಿ ಕಾಯ್ದೆಗಳ ಚರ್ಚೆಗೆ ಆಕ್ಷೇಪ ದಾಖಲು

ನವದೆಹಲಿ, ಮಾ. 9 – ಭಾರತದ ಕೃಷಿ ಸುಧಾರಣೆಗಳ ಕುರಿತು ಬ್ರಿಟನ್ ಸಂಸತ್ತಿನಲ್ಲಿ ಚರ್ಚೆ ನಡೆಸಿದ್ದಕ್ಕೆ ಬ್ರಿಟಿಷ್ ಉಚ್ಚಾಯುಕ್ತರನ್ನು ಕರೆಸಿಕೊಂಡು ಭಾರತ ತನ್ನ ಆಕ್ಷೇಪ ದಾಖಲಿಸಿದೆ.

ಬ್ರಿಟನ್ ಸಂಸತ್ತಿನಲ್ಲಿ ಭಾರತದ ಕೃಷಿ ಸುಧಾರಣೆಗಳ ಕುರಿತು ಚರ್ಚಿಸಿರುವುದು ಇನ್ನೊಂದು ಪ್ರಜಾಸತ್ತಾತ್ಮಕ ದೇಶದ ರಾಜಕೀಯದಲ್ಲಿ ಮಧ್ಯ ಪ್ರವೇಶಿಸಿದಂತೆ ಮತ್ತು ಬ್ರಿಟನ್ ಸಂಸದರು ವಾಸ್ತವಾಂಶ ತಿರುಚುವ ಮೂಲಕ ವೋಟ್ ಬ್ಯಾಂಕ್ ರಾಜಕೀಯ ಮಾಡುವುದರಿಂದ ದೂರವಿರಬೇಕು ಎಂದೂ ಸಹ ವಿದೇಶಾಂಗ ಕಾರ್ಯದರ್ಶಿ ಹರ್ಷ ವರ್ದನ್ ಶ್ರಿಂಗ್ಲ ಅವರು ರಾಯಭಾರಿಗೆ ತಿಳಿಸಿದ್ದಾರೆ.

## ಖಾಸಗೀಕರಣ ವಿರೋಧಿಸಿ ದೇಶವ್ಯಾಪಿ 2 ದಿನದ ಬ್ಯಾಂಕ್ ಮುಷ್ಕರ



ದಾವಣಗೆರೆ, ಮಾ.9 - ಕೇಂದ್ರ ಸರಕಾರ ಇತ್ತೀಚಿಗೆ ಮಂಡಿಸಿದ ಬಜೆಟ್‌ನಲ್ಲಿ ಬ್ಯಾಂಕ್ ಖಾಸಗೀಕರಣದ ಪ್ರಸ್ತಾಪವನ್ನು ವಿರೋಧಿಸಿ ದೇಶವ್ಯಾಪಿ ಎರಡು ದಿನಗಳ ಬ್ಯಾಂಕ್ ಮುಷ್ಕರವನ್ನು ನಡೆಸಲಾಗುವುದು ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ತಿಳಿಸಿದ್ದಾರೆ.

ದೇಶ ವಿರೋಧಿ ಮತ್ತು ಜನ ವಿರೋಧಿಯಾದ ಈ ಪ್ರಸ್ತಾಪಗಳನ್ನು ಖಂಡಿಸಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯು (UFBU) ಮಾರ್ಚ್ 15 ಮತ್ತು 16 ರಂದು 2 ದಿನಗಳ ಅಖಿಲ ಭಾರತ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿದೆ. ಈ ಮುಷ್ಕರದಲ್ಲಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯ ಎಲ್ಲಾ 9 ಸಂಘಟನೆಗಳ ಮತ್ತು ಗ್ರಾಮೀಣ ಬ್ಯಾಂಕ್‌ಗಳ ಸಂಘಟನೆಗಳ ಸುಮಾರು 10 ಲಕ್ಷ ಬ್ಯಾಂಕ್ ಉದ್ಯೋಗಿಗಳು ಪಾಲ್ಗೊಳ್ಳಲಿದ್ದಾರೆ.

ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯ ಎಲ್ಲಾ ಸದಸ್ಯರು, ಗ್ರಾಮೀಣ ಬ್ಯಾಂಕ್ ಉದ್ಯೋಗಿಗಳು, ನಿವೃತ್ತ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ ಸದಸ್ಯರು ಹಾಗೂ ಸಾರ್ವಜನಿಕರು ಮುಷ್ಕರದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸರಕಾರದ ಬ್ಯಾಂಕ್ ಖಾಸಗೀಕರಣದ ನಡೆಯನ್ನು ಹಿಮ್ಮೆಟ್ಟಿಸಬೇಕಾಗಿ ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಹೆಚ್.ಎಸ್. ತಿಪ್ಪೇಸ್ವಾಮಿ ತಿಳಿಸಿದ್ದಾರೆ.

# ಹರಿಯಾಣ ಸ್ಥಳೀಯರ ಮೀಸಲಾತಿಗೆ ಆರ್.ಎಸ್.ಎಸ್. ಆಕ್ಷೇಪ

ನವದೆಹಲಿ ಮಾ. 9 – ಹರಿಯಾಣದ ಬಿಜೆಪಿ - ಜೆಜೆಪಿ ಮೈತ್ರಿ ಸರ್ಕಾರ ಖಾಸಗಿ ವಲಯದ ಉದ್ಯೋಗದಲ್ಲಿ ಸ್ಥಳೀಯರಿಗೆ ಶೇ.75ರ ಮೀಸಲಾತಿ ಜಾರಿಗೆ ತಂದಿರುವುದು ಆರ್.ಎಸ್.ಎಸ್. ಆಕ್ಷೇಪಕ್ಕೆ ಕಾರಣವಾಗಿದೆ. ಸರ್ಕಾರದ ನಿಲುವು 'ಒಂದು ದೇಶ, ಒಂದು ಜನ' ಎಂಬ ಸಂಘದ ನಿಲುವಿಗೆ ವಿರುದ್ಧವಾಗಿದೆ ಎಂದು ಸಂಘದ ಹಿರಿಯ ಪದಾಧಿಕಾರಿಯೊಬ್ಬರು ಹೇಳಿದ್ದಾರೆ. ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆ ಕಾರಣದಿಂದಾಗಿ ಸರ್ಕಾರ ಒತ್ತಡಕ್ಕೆ ಸಿಲುಕಿ ಈ ಕ್ರಮ ತೆಗೆದುಕೊಂಡಿದೆ ಎಂದು ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

50 ಸಾವಿರ ರೂ.ಗಳಿಗಿಂತ ಕಡಿಮೆ ಮಾಸಿಕ ವೇತನದ ಹುದ್ದೆಗಳಲ್ಲಿ ಶೇ.75ರಷ್ಟನ್ನು ಸ್ಥಳೀಯರಿಗೆ ಮೀಸಲಿಡಲು ಹರಿಯಾಣ ಸರ್ಕಾರ ಶಾಸನ ರೂಪಿಸಿದೆ.

ಬಿಜೆಪಿ ಈ ಕಾಯ್ದೆಯ ಬಗ್ಗೆ ಪೂರ್ಣ ಒಲವು ಹೊಂದಿಲ್ಲ. ಆದರೆ, ರೈತರ ಪ್ರತಿಭಟನೆಗಳು ಹಾಗೂ ಖಾಪ್ ಪಂಚಾಯತ್‌ಗಳ ಪ್ರತಿಭಟನೆಗಳ ಕಾರಣದಿಂದಾಗಿ ಜೆ.ಜೆ.ಪಿ. ಒತ್ತಡಕ್ಕೆ ಸಿಲುಕಿದೆ. ಅದರ ಆಗ್ರಹದಂತೆ ಕಾಯ್ದೆ ಜಾರಿಗೆ ತರಲಾಗಿದೆ ಎಂದು ಸಂಘದ ನಾಯಕರೊಬ್ಬರು ಹೇಳಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 8.3.2021ನೇ ಸೋಮವಾರ ಬೆಳಿಗ್ಗೆ 6 ಗಂಟೆಗೆ ನಿಧನರಾದ
ಕೆ.ಬಿ. ಬಡಾವಣೆ, ಜಂಬಣ್ಣ ಕಾಂಪೌಂಡ್ ವಾಸಿ,
**ಶ್ರೀಮತಿ ಪುಷ್ಪ ಹೆಚ್.ವಿ.**
ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ, ಮೃತರ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುವ
ತಮ್ಮಂದಿರುಗಳಾದ :
✦ ಭಾಸ್ಕರ್ ಬಿ.ಎಸ್. ✦ ಮಂಜುನಾಥ ಎ.ಬಿ.
✦ ಸಿದ್ದೇಶ ಬಿ. ✦ ಗುರುಪ್ರಸಾದ್ ಎಸ್.
ಮತ್ತು ನಾಥಪಂಥ ಸಮಾಜದವರು








**ಹೃದಯಪೂರ್ವಕ ಅಭಿನಂದನೆಗಳು**



ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವ
ನಮ್ಮ ಸಂಘದ ನಿರ್ದೇಶಕರೂ ಹಾಗೂ
ದಿ|| ಶಾಮನೂರು ಕಲ್ಲೇಶಪ್ಪನವರ ಪುತ್ರರೂ ಆದ
**ಶ್ರೀ ಪವಿತ್ರ ಶಾಮನೂರು**
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಶ್ರೀ ಜಿ.ಎಸ್. ಪರಮೇಶ್ವರಗೌಡ್ರು, ಅಧ್ಯಕ್ಷರು — ಶ್ರೀ ಬಿ.ಆರ್. ಸೋಮಶೇಖರಪ್ಪ, ಉಪಾಧ್ಯಕ್ಷರು

ನಿರ್ದೇಶಕರುಗಳು :
✦ ಶ್ರೀ ಟಿ.ಹೆಚ್. ಶಂಕರಪ್ಪ ✦ ಶ್ರೀ ಜಿ. ಸೋಮಶೇಖರ್
✦ ಶ್ರೀ ಬಿ.ಜಿ. ನಾಗರಾಜ್ ✦ ಶ್ರೀ ಬಿ. ನಾಗೇಂದ್ರಪ್ಪ ✦ ಶ್ರೀ ಎನ್. ಉಮಾಪತಿ
✦ ಶ್ರೀ ಕೆ.ಜಿ. ವಾಮದೇವಪ್ಪ ✦ ಶ್ರೀ ಡಿ.ಎಸ್. ನಂಜಪ್ಪ
✦ ಶ್ರೀ ಎಸ್. ಧನ್ಯಾನಾಯ್ಕ ✦ ಶ್ರೀಮತಿ ಹೇಮಾವತಿ ✦ ಶ್ರೀಮತಿ ಸವಿತಾ
✦ ಆರ್. ಗಂಗಾಧರಪ್ಪ, ಮಾಜಿ ಕಾರ್ಯದರ್ಶಿ ✦ ಡಿ.ಎಸ್. ಜಾಧವ್, ಹಾಲಿ ಕಾರ್ಯದರ್ಶಿ

ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ನಿಯಮಿತ, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte